Reg. No.JRL/A/SOU.Act./790/2002-03

Jolle Group

Estd. 1994

# ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ.

## 32ನೇ ವಾರ್ಷಿಕ ವರದಿ 2025-26















ಸದಸ್ಯರು 52+ ಸಾವಿರ

ಠೇವು 424+ ಕೋಟಿ

ಖರೀದಿ 22+ ಕೋಟಿ

ಸಾಲ 254+ ಕೋಟಿ

ಶಾಖೆಗಳು 82

ಮಾರಾಟ 25+ ಕೋಟಿ

# ಪ್ರೇರಣೆ



ಸಂಸ್ಥಾಪಕರು
**ಶ್ರೀ ಅಣ್ಣಾಸಾಹೇಬ ಶಂಕರ ಜೊಲ್ಲೆ**
ಅಧ್ಯಕ್ಷರು, ಬಿ.ಡಿ.ಸಿ.ಸಿ. ಬ್ಯಾಂಕ್–ಬೆಳಗಾವಿ
ಮಾಜಿ ಸಂಸದರು–ಚಿಕ್ಕೋಡಿ



ಸಹ ಸಂಸ್ಥಾಪಕರು
**ಸೌ ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ**
ಶಾಸಕರು, ನಿಪ್ಪಾಣಿ
ಮಾಜಿ ಸಚಿವರು – ಕರ್ನಾಟಕ ಸರ್ಕಾರ

## ನಿರ್ದೇಶಕ ಮಂಡಳಿ



ಶ್ರೀ ಅಣ್ಣಾಸಾಹೇಬ ಎಸ್. ಜೊಲ್ಲೆ
ಯಕ್ಸಂಬಾ
ಸಂಸ್ಥಾಪಕರು



ಸೌ ಶಶಿಕಲಾ ಎ. ಜೊಲ್ಲೆ
ಯಕ್ಸಂಬಾ
ಸಹ–ಸಂಸ್ಥಾಪಕರು, ನಿರ್ದೇಶಕರು



ಶ್ರೀ ಬಾಬುರಾವ ಎನ್. ಮಾಳಿ
ನಾಗರಾಳ
ಅಧ್ಯಕ್ಷರು



ಶ್ರೀ ವಿಶ್ವನಾಥ ಡಿ. ಪೇಟಕರ
ಯಕ್ಸಂಬಾ
ಉಪಾಧ್ಯಕ್ಷರು



ಶ್ರೀ ಬಸವಪ್ರಸಾದ ಎ. ಜೊಲ್ಲೆ
ಯಕ್ಸಂಬಾ
ನಿರ್ದೇಶಕರು



ಶ್ರೀ ಜಗದೀಶ ಎಲ್. ಹಿಂಗ್ಲಜೆ
ಯಕ್ಸಂಬಾ
ನಿರ್ದೇಶಕರು



ಶ್ರೀ ಕಲ್ಲಪ್ಪಾ ಬಿ. ನಾಯಿಕ
ಹುನ್ನರಗಿ
ನಿರ್ದೇಶಕರು



ಶ್ರೀ ಕೃಷ್ಣಪ್ಪಾ ಎ. ಪೂಜಾರಿ
ಯಕ್ಸಂಬಾ
ನಿರ್ದೇಶಕರು



ಶ್ರೀ ಮಹೇಶ ಎ. ಭಾತೆ
ಕರೋಶಿ
ನಿರ್ದೇಶಕರು



ಶ್ರೀ ರಮೇಶ ಎಮ್. ಚೌಗಲೆ
ಜನವಾಡ
ನಿರ್ದೇಶಕರು



ಶ್ರೀ ಲಕ್ಷ್ಮಣ ಎಸ್. ಪ್ರಭಾತ
ಯಕ್ಸಂಬಾ
ನಿರ್ದೇಶಕರು



ಶ್ರೀ ಜಗದೀಶ ಕೆ. ಜಾಧವ
ಯಕ್ಸಂಬಾ
ನಿರ್ದೇಶಕರು



ಶ್ರೀ ಪವನ ಎಸ್. ಪಾಟೀಲ
ಹರಗಾಪೂರ
ನಿರ್ದೇಶಕರು



ಶ್ರೀ ಬಾಳಾಸಾಬ ಕೆ. ಶಿಂದೆ
ಬೇಡಕಿಹಾಳ
ನಿರ್ದೇಶಕರು



ಶ್ರೀ ರಾವಸಾಹೇಬ ಎಸ್. ಬಾಕಳೆ
ಯಕ್ಸಂಬಾ
ನಿರ್ದೇಶಕರು



ಶ್ರೀ ಆನಂದ ಜೆ. ಗಿಡ್ಡ
ಯಕ್ಸಂಬಾ
ನಿರ್ದೇಶಕರು



ಶ್ರೀ ಅಮೃತ ಸಿ. ಖೋತ
ಯಾದನವಾಡಿ
ನಿರ್ದೇಶಕರು



ಸೌ ಸವಿತಾ ಸಿ. ಉಂದುರೆ
ಮಲಿಕವಾಡ
ನಿರ್ದೇಶಕರು

## ಆಡಳಿತ



ಶ್ರೀ ಸಂತೋಷ ಎಸ್. ಪಾಟೀಲ
B.A
ಪ್ರಧಾನ ವ್ಯವಸ್ಥಾಪಕರು (ಪ್ರಭಾರ)



ಶ್ರೀ ಮಹಾಂತೇಶ ಬಿ. ಶಿರೋಳ
B.A.PGDCM
ಸಹಾಯಕ ಪ್ರಧಾನ ವ್ಯವಸ್ಥಾಪಕರು



ಶ್ರೀ ಸಂತೋಷ ಆರ್. ಪೂಜಾರಿ
DCM
ಸಹಾಯಕ ಪ್ರಧಾನ ವ್ಯವಸ್ಥಾಪಕರು



ಶ್ರೀ ತಾನಾಜಿ ಎಸ್. ಶಿಂದೆ
M.Com
ಲೆಕ್ಕಾಧಿಕಾರಿ

# ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ

## 32 ನೇ ವಾರ್ಷಿಕ ಸರ್ವಸಾಧಾರಣ ಸಭೆಯ ನೋಟಿಸು

ಸಹಕಾರಿ ಸಂಘದ 2025–2026 ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯನ್ನು **ರವಿವಾರ ದಿನಾಂಕ 10–05–2026** ರಂದು ಸಾಯಂಕಾಲ 5:15 ಗಂಟೆಗೆ, ಸ್ಥಳ : ಶಿವಶಂಕರ ಜೊಲ್ಲೆ ಪಬ್ಲಿಕ್ (ಸಿ.ಬಿ.ಎಸ್.ಇ.) ನಣದಿ ಶಾಲೆಯ ಆವರಣದಲ್ಲಿ, ಈ ಕೆಳಗಿನ ವಿಷಯಗಳನ್ನು ಚರ್ಚಿಸಲು ಸರ್ವ ಸದಸ್ಯರನ್ನು ಕರೆಯಲಾಗಿದೆ. ಸದಸ್ಯರು ವೇಳೆಗೆ ಸರಿಯಾಗಿ ಹಾಜರಿರಬೇಕಾಗಿ ವಿನಂತಿ.

### –* ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು *–

1. ಹಿಂದಿನ ಅಂದರೆ 10–05–2025 ಕ್ಕೆ ಜರುಗಿದ ವಾರ್ಷಿಕ ಸರ್ವ ಸಾಧಾರಣ ಸಭೆಯ ನಡುವಳಿಕೆಗಳನ್ನು ಓದುವುದು ಮತ್ತು ಖಚಿತಪಡಿಸುವುದು.
2. ನಿರ್ದೇಶಕ ಮಂಡಳಿಯು ಮಂಡಿಸಿದ ಸನ್ 2025–2026 ನೇ ಸಾಲಿನ ವಾರ್ಷಿಕ ವರದಿಯನ್ನು ಓದಿ ಖಚಿತಪಡಿಸಿಕೊಳ್ಳುವುದು.
3. ಸನ್ 2025–2026 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಓದಿ ಅಂಗೀಕರಿಸುವುದು.
4. ಸನ್ 2025–2026 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿ, ಅಂಗೀಕರಿಸುವುದು.
5. ನಿರ್ದೇಶಕ ಮಂಡಳಿಯವರು ಶಿಫಾರಸ್ಸು ಮಾಡಿದ ಸನ್ 2025–2026 ನೇ ಸಾಲಿನ ನಿವ್ವಳ ಲಾಭ ವಿಭಾಗಣೆಗೆ ಮಂಜೂರು ನೀಡುವುದು.
6. ಸನ್ 2026–2027 ನೇ ಸಾಲಿಗಾಗಿ ನಿರ್ದೇಶಕ ಮಂಡಳಿಯವರು ತಯಾರಿಸಿದ ಅಂದಾಜು ಪತ್ರಿಕೆಗೆ ಮಂಜೂರು ನೀಡುವುದು.
7. ಸನ್ 2026–2027 ನೇ ಸಾಲಿಗಾಗಿ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸುವುದು.
8. ನೂತನ ಶಾಖೆಗಳಿಗೆ ಮಂಜೂರು ನೀಡುವ ಕುರಿತು. ನೂತನ ಶಾಖೆಗಳ ಜಿಲ್ಲಾವಾರು ಪಟ್ಟಿ ಈ ಕೆಳಗಿನಂತಿದೆ.

   **1) ಬೆಳಗಾವಿ ಜಿಲ್ಲೆ :** 1. ಹಾರೂಗೇರಿ 2. ಅಥಣಿ 3. ಜಾಗನೂರ 4. ಚುಂಚನೂರ 5. ಎಲಿಮುನ್ನೋಳ್ಳಿ 6. ಖನದಾಳ

   ಈ ರೀತಿ ನಮ್ಮ ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ಶಾಖೆಗಳನ್ನು ಪ್ರಾರಂಭಿಸುವ ಗುರಿ ಇಟ್ಟುಕೊಂಡಿದ್ದು, ಸದರಿ ನೂತನ ಶಾಖೆಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರಿಂದ ಅನುಮತಿ ಪಡೆದು ಪ್ರಾರಂಭಿಸಲು ನಿರ್ದೇಶಕ ಮಂಡಳಿಗೆ ಅಧಿಕಾರ ನೀಡಬೇಕಾಗಿ ವಿನಂತಿ.
9. ಈಗಾಗಲೇ ಪ್ರಾರಂಭಿಸಿದ ಶಾಖೆಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರಿಂದ ಅನುಮತಿ ಪಡೆಯುವ ಕುರಿತು.

   **1) ಬೆಳಗಾವಿ ಜಿಲ್ಲೆ :** 1. ಹೆಬ್ಬಾಳ 2. ನಿಡಸೋಶಿ 3. ಮುಗಳಖೋಡ 4. ಬೂದಿಹಾಳ 5. ಕುಲಗೋಡ 6. ಹಳ್ಳೂರ 7. ಹಂದಿಗುಂದ 8. ನಾಗನೂರ 9. ಕಾಕತಿ 10. ಪಾಶ್ಚಾಪೂರ 11. ಅಂಕಲಗಿ 12. ಖಡಕಲಾಟ 13. ಮುರಗೋಡ 14. ಮನಗುತ್ತಿ 15. ಬೆಳವಡಿ 16. ಎಮ್ ಕೆ ಹುಬ್ಬಳ್ಳಿ 17. ಬೆಳಗಾವಿ (ಮಹಾಂತೇಶ ನಗರ) 18. ಕೊಕಟನೂರ 19. ನೇಸರಗಿ 20. ಸುಲ್ತಾನಪೂರ 21. ಹಿರೇಬಾಗೇವಾಡಿ 22. ಇಟಗಿ 23. ಗೋಕಾಕ 24. ಸಂಕೇಶ್ವರ 25.ಅನಂತಪೂರ 26. ಬೆಳಗಾವಿ (ಶಹಾಪೂರ) 27. ಮಮದಾಪೂರ 28. ಮದಭಾವಿ 29. ಗುಡಸ 30. ದಡ್ಡಿ 31. ಘೋಡಗೇರಿ 32. ನಾಯಿಂಗ್ಲಜ. 33. ನಿಪ್ಪಾಣಿ

   **ಬಜಾರ ಶಾಖೆಗಳು :** 1. ಯಕ್ಸಂಬಾ–2 2. ಭೋಜ 3. ಚಿಕ್ಕೋಡಿ 4. ಗಂಗಾ ಶುಗರ 5. ಸಂಕೇಶ್ವರ 6. ಸದಲಗಾ 7. ಗಳತಗಾ 8. ಕೇರೂರ 9. ಅಂಕಲಿ 10. ನಣದಿ 11. ಪ್ರಿಂಟಿಂಗ್ ಪ್ರೆಸ್ ನಣದಿ 12. ನಿಪ್ಪಾಣಿ ಬಜಾರ 13. ಹಾಲಸಿದ್ದನಾಥ ಬಜಾರ ನಿಪ್ಪಾಣಿ 14. ಜ್ಯೋತಿ ಇಲೆಕ್ಟ್ರೋನಿಕ್ಸ್ 15. ಹೋಲಸೇಲ್ ಡಿಸ್ಟ್ರೂಬ್ಯೂಟರ್ ಯಕ್ಸಂಬಾ.

   **2) ವಿಜಯಪೂರ ಜಿಲ್ಲೆ :** 1. ಇಂಡಿ 2. ಆಲಮೇಲ 3. ವಿಜಯಪೂರ 4. ಮುದ್ದೇಬಿಹಾಳ 5. ನಾಲತವಾಡ 6. ನಿಡಗುಂದಿ

   **3) ಬಾಗಲಕೋಟ ಜಿಲ್ಲೆ :** 1. ಥವಳೇಶ್ವರ 2. ಅಮೀನಗಡ 3. ಬಾಗಲಕೋಟ 4. ಕಮತಗಿ 5. ಹುನ್ನೂರ 6. ಜಗದಾಳ 7. ಬೆಳಗಲಿ 8. ಬಾದಾಮಿ 9. ಮುಧೋಳ 10. ಲೋಕಾಪೂರ **4) ಗದಗ ಜಿಲ್ಲೆ :** 1. ಗಜೇಂದ್ರಗಡ **5) ಧಾರವಾಡ ಜಿಲ್ಲೆ :** 1. ನವಲಗುಂದ

   ಈ ರೀತಿ ನಮ್ಮ ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ಈಗಾಗಲೆ ಶಾಖೆಗಳನ್ನು ಪ್ರಾರಂಭಿಸಲಾಗಿದ್ದು ಇವುಗಳಲ್ಲಿ ಹೆಚ್ಚಿನ ಶಾಖೆಗಳು ಲಾಭದಲ್ಲಿದ್ದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರಿಂದ ಅನುಮತಿ ಪಡೆಯಲು ನಿರ್ದೇಶಕ ಮಂಡಳಿಗೆ ಅಧಿಕಾರ ನೀಡಬೇಕಾಗಿ ವಿನಂತಿ.
10. 2021–2022 ರ ವರೆಗಿನ ಇದ್ದ ಲಾಭಾಂಶವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲು ಒಪ್ಪಿಗೆ ನೀಡುವ ಕುರಿತು.
11. ಅಧ್ಯಕ್ಷರ ಪರವಾನಿಗೆಯಿಂದ ಬರಬಹುದಾದ ಯಾವುದೇ ಇತರ ವಿಷಯಗಳು.

ದಿಗ್ದರ್ಶಕ ಮಂಡಳಿಯ ಆದೇಶದ ಮೇರೆಗೆ,

ಸ್ಥಳ : ಯಕ್ಸಂಬಾ
ದಿನಾಂಕ : 18–04–2026

**ಶ್ರೀ ಸಂತೋಷ ಎಸ್. ಪಾಟೀಲ** B.A.
ಪ್ರಧಾನ ವ್ಯವಸ್ಥಾಪಕರು (ಪ್ರಭಾರ)

**ಸೂಚನೆ –** 1) ಸಭೆಗೆ ಬರುವಾಗ ಸಭೆಯ ನೋಟಿಸು ತರಬೇಕು ಹಾಗೂ ಸಭೆಯು ನಡೆಯುವ ಸ್ಥಳವನ್ನು ಪ್ರವೇಶಿಸುವ ಮುನ್ನ ಹಾಜರಿ ಪುಸ್ತಕದಲ್ಲಿ ರುಜು ಮಾಡಬೇಕು. 2) ಸಭೆಯಲ್ಲಿ ಚರ್ಚಿಸುವ, ಸೂಚಿಸುವ ವಿಷಯಗಳು ಅಥವಾ ದೂರುಗಳೇನಾದರು ಇದ್ದಲ್ಲಿ ಸಭೆಯ ದಿನಾಂಕದಿಂದ 5 ದಿವಸ ಮುಂಚಿತವಾಗಿ ಲಿಖಿತವಾಗಿ ಸಹಕಾರಿಯ ಪ್ರಧಾನ ವ್ಯವಸ್ಥಾಪಕರ ವಿಳಾಸಕ್ಕೆ ತಲುಪಿಸಬೇಕು. 3) ಸಭೆಯ ವಿಷಯ ನಂ. 2,3,4,5, ಮತ್ತು 6 ರ ವಿವರಗಳನ್ನು ಅಥಾವೆ ಪುಸ್ತಕದಲ್ಲಿ ನಮೂದಿಸಲಾಗಿದೆ.

Zoom Meeting Link - https://us06web.zoom.us/meeting/register/Ed18d8g4Rneb8KTpXGEQ4Q



ಸಹಕಾರ ರತ್ನ
**ಶ್ರೀ. ಅಣ್ಣಾಸಾಹೇಬ ಶಂಕರ ಜೊಲ್ಲೆ**
ಸಂಸ್ಥಾಪಕರು, ಜೊಲ್ಲೆ ಗ್ರುಪ್
ಅಧ್ಯಕ್ಷರು, ಬಿ.ಡಿ.ಸಿ.ಸಿ. ಬ್ಯಾಂಕ್, ಬೆಳಗಾವಿ
ಮಾಜಿ-ಸಂಸದರು, ಚಿಕ್ಕೋಡಿ.

## "ಸಂಸ್ಥಾಪಕರ ನುಡಿ"

ಶ್ರೀ ಜ್ಯೋತಿ

## ವಿಕಾಸದ ಪಥದಲ್ಲಿ.......

ಸಹಕಾರ ಕ್ಷೇತ್ರ ಗ್ರಾಮೀಣ ಜನತೆಯ ಜೀವನಾಡಿ ಹಾಗೂ ಪರಮಮಿತ್ರ ಇದ್ದಂತೆ. ಈ ಕ್ಷೇತ್ರದಲ್ಲಿ ಅಂದುಕೊಂಡಿದ್ದನ್ನು ಸಾಧಿಸಲು, ಉತ್ತುಂಗದ ಶಿಖರವನ್ನು ಏರಲು ಬಹಳಷ್ಟು ಅವಕಾಶಗಳಿವೆ. ಸಹಕಾರ ಕ್ಷೇತ್ರ ನಮ್ಮ ದೇಶದಲ್ಲಿ ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು, ಸಹಕಾರ ಸಂಘವನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಭಾಗದ ಜನರಿಗೆ ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸಿ ನಿರುದ್ಯೋಗವನ್ನು ಹೋಗಲಾಡಿಸಬಹುದಾಗಿದೆ. ಅಲ್ಲದೆ ಸಹಕಾರ ಕ್ಷೇತ್ರ ಬೆಳೆದರೆ ಜನಸಾಮಾನ್ಯರು ಉತ್ತಮ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಇಂದು ಜೊಲ್ಲೆ ಗ್ರೂಪ್ ತನ್ನ ವಿವಿಧ ಅಂಗ ಸಂಸ್ಥೆಗಳ ಮೂಲಕ ಸಹಕಾರ, ಸಂಘ, ಕೃಷಿ, ಶಿಕ್ಷಣ ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಉನ್ನತ ಮಟ್ಟದ ಸಾಧನೆಯನ್ನು ಮಾಡುವುದರ ಜೊತೆಗೆ ದೇಶ್ಯಾದ್ಯಂತ ಚಿರಪರಿಚಿತವಾಗಿದೆ.

ಜೊಲ್ಲೆ ಗ್ರೂಪ್ ಸಂಸ್ಥೆಯ ಅಡಿಯಲ್ಲಿ ಹಲವಾರು ಸಂಘ ಸಂಸ್ಥೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಜೊಲ್ಲೆ ಗ್ರುಪ್ ಸಂಸ್ಥೆಯು ಯಾವಾಗಲೂ ಸಮಾಜಮುಖಿ ಕಾರ್ಯಗಳಲ್ಲಿ ನಿರತವಾಗಿದೆ. ಸಹಾಯವನ್ನು ಅರಸಿ ಬಂದ ಎಲ್ಲರಿಗೂ ಹಾಗೂ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಸಂಸ್ಥೆಯು ಬೆಂಗಾವಲಾಗಿ ನಿಂತಿದೆ.

### ಆಧುನಿಕತೆಯತ್ತ ಹೆಜ್ಜೆ-

1994 ರಲ್ಲಿ ಪ್ರಾರಂಭವಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸಹಕಾರಿಯು 2003 ರಲ್ಲಿ ಸೌಹಾರ್ದ ಕಾಯ್ದೆಯಡಿ ನೋಂದಣಿಯಾಗಿ ಜ್ಯೋತಿ ಬಜಾರ ಸ್ಥಾಪಿಸಿ ಮಾರುಕಟ್ಟೆ ವ್ಯವಸ್ಥೆಗೆ ಪಾದಾರ್ಪಣೆ ಮಾಡಿದೆ. ಯಕ್ಸಂಬಾದಂತಹ ಒಂದು ಪುಟ್ಟ ಹಳ್ಳಿಯಲ್ಲಿ ಆಧುನಿಕ ಸಭಾಗೃಹ ಹಾಗೂ ಲಿಫ್ಟ್ ಅಳವಡಿಸಿದ ನೂತನ ಸುಸಜ್ಜಿತವಾದ ಮುಖ್ಯ ಕಛೇರಿಯ ಕಟ್ಟಡವನ್ನು ಹೊಂದಿದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಜನರ ಬೇಡಿಕೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲಿವೆ. ಅದರಲ್ಲಿ ಮಾರುಕಟ್ಟೆ ವ್ಯವಸ್ಥೆಯು ಒಂದು. ನಗರ ಪ್ರದೇಶಗಳಲ್ಲಿ ಎಲ್ಲೆಡೆ ಒಂದೇ ಸೂರಿನಡಿ ಎಲ್ಲ ವಸ್ತುಗಳು ಸಿಗುವಂತೆ ಬಜಾರ್‌ಗಳು ತಲೆ ಎತ್ತುತ್ತಿವೆ. ಆದರೆ ಕಳೆದ ಎರಡು ದಶಕಗಳ ಹಿಂದೆಯೇ ಚಿಕ್ಕೋಡಿ ತಾಲೂಕಿನ ಒಂದು ಪುಟ್ಟ ಹಳ್ಳಿ ಯಕ್ಸಂಬಾದಲ್ಲಿ ಜ್ಯೋತಿ ಬಜಾರ್ ಪ್ರಾರಂಭಿಸಿ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

### ಜ್ಯೋತಿ ಬಜಾರ-

ಸಹಕಾರ ಕ್ಷೇತ್ರದ ಮೂಲಕ ಗ್ರಾಹಕರಿಗೆ ಆರ್ಥಿಕ ನೆರವು ನೀಡುವುದರ ಜೊತೆಗೆ ದಿನಬಳಕೆಯ ವಸ್ತುಗಳನ್ನು ಒಂದೇ ಸೂರಿನಡಿ ಕಲ್ಪಿಸಿಕೊಡುವ ವ್ಯವಸ್ಥೆಯನ್ನು ಯಕ್ಸಂಬಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘವು ಕಳೆದ ಎರಡು ದಶಕಗಳಿಂದ ಮಾರುಕಟ್ಟೆ ವ್ಯವಹಾರವನ್ನು ಜ್ಯೋತಿ ಬಜಾರಗಳ ಮೂಲಕ ಗುಣಮಟ್ಟ ಕಾಯ್ದುಕೊಂಡು ಬಂದಿದೆ.

ಜೊಲ್ಲೆ ಗ್ರೂಪ್ ಸಂಸ್ಥೆಯ ಅಂಗ ಸಂಸ್ಥೆಗಳಲ್ಲೊಂದಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯು "ಜ್ಯೋತಿ" ಬ್ರ್ಯಾಂಡ್‌ನಡಿ ಹಲವಾರು ಉತ್ಪನ್ನಗಳನ್ನು ಗ್ರಾಹಕರಿಗೆ ಯೋಗ್ಯ ಬೆಲೆಯಲ್ಲಿ ಪರಿಶುದ್ಧ ಗೃಹ ಉಪಯೋಗಿ ವಸ್ತುಗಳು ನೇರವಾಗಿ ಉತ್ಪಾದನಾ ಘಟಕಗಳಿಂದ ಖರೀದಿಸಿ ಯಾವುದೇ ಹೆಚ್ಚಿನ ಲಾಭದ ಫಲಾಪೇಕ್ಷೆಯಿಲ್ಲದೇ ಪರಿಶುದ್ಧ ಹಾಗೂ ಗುಣಮಟ್ಟದ ವಸ್ತುಗಳನ್ನು ಮಾರಾಟ ಬೆಲೆಗಿಂತ ಕಡಿಮೆ ಬೆಲೆಗೆ ಗ್ರಾಹಕರಿಗೆ ಒದಗಿಸುತ್ತಿದೆ ಹಾಗೂ ಸ್ವ-ಸಹಾಯ ಸಂಘಗಳಿಂದ ತಯಾರಿಸಲ್ಪಟ್ಟ ವಸ್ತುಗಳಿಗೆ (ಸಜ್ಜಿ ರೊಟ್ಟಿ ಎಲ್ಲ ತರಹದ ಚಟ್ನಿಗಳು, ಸೆಂಡಿಗೆಗಳು, ಹಪ್ಪಳಗಳು) ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕೇವಲ ರಿಟೇಲ್ ಉದ್ಯಮದಲ್ಲಿ ಅಷ್ಟೇ ಅಲ್ಲದೇ ಹಣಕಾಸಿನ ವ್ಯವಹಾರಗಳ ಸೇವೆಯನ್ನು ಕೂಡ ಸಾರ್ವಜನಿಕರಿಗೆ ಒದಗಿಸುವ ಗುರಿಯನ್ನಿಟ್ಟುಕೊಂಡು ಕಳೆದ ಏಳು ವರ್ಷಗಳಿಂದ ಕ್ರೆಡಿಟ್ ವಿಭಾಗದ ಶಾಖೆಗಳನ್ನು ಪ್ರಾರಂಭಿಸಲಾಗಿದೆ, ಈಗ ಐದು ಜಿಲ್ಲೆಯಾದ್ಯಂತ ಒಟ್ಟು 64 ಕ್ರೆಡಿಟ್ ವಿಭಾಗದ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು. ಹಾಗೂ ಇನ್ನೂ ಕ್ರೆಡಿಟ್ ವಿಭಾಗದ ಶಾಖೆಗಳನ್ನು ಕರ್ನಾಟಕ ರಾಜ್ಯಾದ್ಯಂತ ವಿಸ್ತರಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆ.

### ಕಾರ್ಯ ಸಾಧನೆ -

ಸಹಕಾರಿ ಸಂಘವು 1994 ನೋಂದಣಿಗೊಂಡು ಇಂದು ಜ್ಯೋತಿ ಬಜಾರ ವಿಭಾಗ, ಮೆಡಿಕಲ್ ವಿಭಾಗ, ಬಟ್ಟೆ ವಿಭಾಗ, ಪ್ರಿಂಟಿಂಗ್ ಪ್ರೆಸ್ ವಿಭಾಗ, ಹೋಲ್‌ಸೇಲ್ ವಿಭಾಗ ಮತ್ತು ಕ್ರೆಡಿಟ್ ವಿಭಾಗಗಳನ್ನು ಒಳಗೊಂಡು ಒಟ್ಟು 82 ಶಾಖೆಗಳನ್ನು ಹೊಂದಿದೆ. ಸಹಕಾರಿಯು ಇಲ್ಲಿಯವರೆಗೆ ಒಟ್ಟು 52,426 ಸದಸ್ಯರನ್ನೊಳಗೊಂಡು, ರೂ. 424 ಕೋಟಿಗೂ ಅಧಿಕ ಠೇವು ಸಂಗ್ರಹಿಸಿ, ರೂ. 254 ಕೋಟಿಗೂ ಅಧಿಕ ಸಾಲ ವಿತರಿಸಿ, 440 ಕೋಟಿ ದುಡಿಯುವ ಬಂಡವಾಳ ಹೊಂದಿ, ರೂ. 02 ಕೋಟಿ 01 ಲಕ್ಷ ಲಾಭ ಗಳಿಸುವದರ ಮೂಲಕ ಸಾಧನೆಯ ಮೈಲುಗಲ್ಲನ್ನು ತಲುಪಿದ್ದೆವೆಂದು ಹೇಳಲು ಹೆಮ್ಮೆ ಎನಿಸುತ್ತದೆ. ಸಹಕಾರಿಯು ಹೆಮ್ಮರವಾಗಿ ಬೆಳೆಯಬೇಕಾದಲ್ಲಿ ಸದಸ್ಯರು ಸಹಕಾರಿಯ ಮೇಲೆ ಇಟ್ಟಂತಹ ಪ್ರೀತಿ-ವಿಶ್ವಾಸ, ನಿರ್ದೇಶಕರ ಅವಿರತ ಪ್ರಯತ್ನ, ಹಿತೈಷಿಗಳ ಸ್ಫೂರ್ತಿದಾಯಕ ಬೆಂಬಲ, ಸಿಬ್ಬಂದಿ ವರ್ಗದವರ ಪ್ರಾಮಾಣಿಕ, ನಿಸ್ವಾರ್ಥ ಹಾಗೂ ಅವಿರತ ಸೇವೆಯೇ ಕಾರಣ.

### ಅಂಗ ಸಂಸ್ಥೆಗಳು-

#### ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ. (ಬಹುರಾಜ್ಯ)

ಯಕ್ಸಂಬಾ ಗ್ರಾಮ ದೇವರಾದ ಶ್ರೀ ಬೀರೇಶ್ವರ ಹೆಸರಿನಲ್ಲಿ 1991 ರಲ್ಲಿ ಸಂಸ್ಥೆಯು ಪ್ರಾರಂಭವಾಯಿತು. ಹಳೆಯ ಪದ್ಧತಿಯ ಆರ್ಥಿಕ ವ್ಯವಸ್ಥೆಯನ್ನು ಬದಲಾವಣೆಗೆ ಒಳಪಡಿಸಿ, ಸಹಕಾರ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವುದರೊಂದಿಗೆ ಸದಸ್ಯರೆಲ್ಲರನ್ನು ಡಿಜಿಟಲ್ ಜಗತ್ತಿನತ್ತ ಓಲೈಸುವ ಕಾರ್ಯ ಈ ಸಂಸ್ಥೆ ಮಾಡುತ್ತಾ ಬಂದಿದೆ. ಸಹಕಾರ ಸಂಘಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ, ಹಲವಾರು ನೂತನ ಜನಪರ ಯೋಜನೆಗಳನ್ನು ಸದಸ್ಯರಿಗೆ ಪರಿಚಯಿಸಿದೆ. ಸಂಸ್ಥೆಯು ಬಹುರಾಜ್ಯ ಸಹಕಾರಿ ಸಂಘಗಳ ಕಾಯ್ದೆ 2002ರಡಿ ನೋಂದಣಿಗೊಂಡು ಇಂದು ಕರ್ನಾಟಕದಲ್ಲಿ 179, ಮಹಾರಾಷ್ಟ್ರದಲ್ಲಿ 49 ಮತ್ತು ಗೋವಾ 05 ಹೀಗೆ ಒಟ್ಟು 233 ಶಾಖೆಗಳನ್ನು ಹೊಂದಿದೆ. ಸಂಘವು 4,25,000 ಸದಸ್ಯರನ್ನು ಹೊಂದಿದ್ದು ಸುಮಾರು ರೂ. 5,000 ಕೋಟಿಗೂ ಮೀರಿ ಠೇವು ಸಂಗ್ರಹಿಸಿದೆ, ರೂ. 3,883 ಕೋಟಿ ಸಾಲ ವಿತರಿಸಿದೆ, ಸುಮಾರು ರೂ 9,000 ಕೋಟಿಗೂ ಹೆಚ್ಚು ವಹಿವಾಟು ನಡೆಸಿದೆ ಹಾಗೂ ಸನ್ 2025-26ರ ಆರ್ಥಿಕ ವರ್ಷದಲ್ಲಿ 51 ಕೋಟಿಗೂ ಅಧಿಕ ಲಾಭಗಳಿಸಿ ಪ್ರಗತಿ ಪಥದಲ್ಲಿ ಸಾಗುತ್ತಿದೆ.

**ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ–**

ಸಂಘವು ಹಂತ ಹಂತವಾಗಿ ರೈತರ ಹಿತಾಸಕ್ತಿಯನ್ನು ಕಾಪಾಡುತ್ತಾ ಆಧುನಿಕತೆಗೆ ಹೊಂದಿಕೊಂಡ ಕೃಷಿ ಪದ್ದತಿಯ ಅರಿವನ್ನು ರೈತರಿಗೆ ಮೂಡಿಸುತ್ತಾ , ರೈತರಿಗೆ ಬೇಕಾಗುವ ಗೊಬ್ಬರ, ಕೀಟನಾಶಕ ಔಷಧಗಳು ನೀರಾವರಿಗೆ ಸಂಬಂಧಪಟ್ಟ ಸಲಕರಣೆಗಳನ್ನು ಯೋಗ್ಯ ದರದಲ್ಲಿ ಪೂರೈಸಲಾಗುತ್ತದೆ. ಅಲ್ಲದೆ ಮಣ್ಣು, ನೀರು ತಪಾಸಣೆ ಜೊತೆಗೆ ತಜ್ಞರಿಂದ ಆಧುನಿಕ ಪದ್ಧತಿಯ ಕೃಷಿಯ ಬಗ್ಗೆ ಆಗಾಗ ಸೂಕ್ತ ಮಾರ್ಗದರ್ಶನವನ್ನು ರೈತರಿಗೆ ನೀಡಲಾಗುತ್ತಿದೆ.

**ಜೊಲ್ಲೆ ಎಜ್ಯುಕೇಶನ್ ಸೊಸಾಯಿಟಿ–**

ಈ ಸಂಸ್ಥೆಯು ಗಡಿ ಭಾಗಗಳಾದ ಯಕ್ಸಂಬಾ, ನಣದಿ ಹಾಗೂ ನಿಪ್ಪಾಣಿ ಶಿಕ್ಷಣ ಸಂಕುಲದಲ್ಲಿ ಅತ್ಯಾಧುನಿಕ ಸೌಕರ್ಯಗಳನ್ನು ಹೊಂದಿ, ನಗರ ಪ್ರದೇಶದ ಮಕ್ಕಳಿಗೆ ಸಿಗುವಂತಹ ಉನ್ನತ ಶ್ರೇಣಿಯ ಮೂಲಭೂತ ಸೌಕರ್ಯಗಳನ್ನು ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಾ ಬಂದಿದೆ. ಎಲ್.ಕೆ.ಜಿ. ಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮ ಶಾಲೆ, ಸಿ.ಬಿ.ಎಸ್.ಇ. ಪಬ್ಲಿಕ್ ಶಾಲೆ, ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಶಿಕ್ಷಣದ ವಿವಿಧ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ನಣದಿ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಸುಸಜ್ಜಿತ ವಸತಿ ನಿಲಯಗಳನ್ನು ಕಲ್ಪಿಸಲಾಗಿದೆ. ಆಶಾಜ್ಯೋತಿ ಬುದ್ದಿಮಾಂದ್ಯ ಮಕ್ಕಳ ಶಾಲೆಯನ್ನು ತೆರೆದು ವಿಶೇಷ ಮಕ್ಕಳಿಗೆ ಸಾಮಾನ್ಯ ಮಕ್ಕಳಂತೆ ಬೆಳವಣಿಗೆ ಹೊಂದಲು ತಜ್ಞ ಶಿಕ್ಷಕರಿಂದ ತರಬೇತಿ ನೀಡಲಾಗುತ್ತಿದೆ. ಅವರಿಗೆ ಉಚಿತ ವಸತಿ ಸೌಲಭ್ಯವನ್ನು ಕೂಡಾ ಕಲ್ಪಿಸಲಾಗಿದೆ.

**ನೂತನವಾಗಿ ಪ್ರಾರಂಭವಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ಪದವಿ ಪೂರ್ವ ವಸತಿಯುತ ವಿಜ್ಞಾನ ಮಹಾವಿದ್ಯಾಲಯದ ಯಶಸ್ವಿ ಮುನ್ನಡೆ–**

ಗ್ರಾಮೀಣ ಭಾಗದ ಎಸ್. ಎಸ್. ಎಲ್. ಸಿ ಉತ್ತೀರ್ಣರಾದ ಮಕ್ಕಳಿಗೆ ಕನಸಾಗಿ ಉಳಿದಿದ್ದ JEE, NEET ಮತ್ತು CET ಪರೀಕ್ಷೆಗಳ ತರಬೇತಿಯನ್ನು ಯಶಸ್ವಿಯಾಗಿ ಪೂರೈಸುವ ನಿಟ್ಟಿನಲ್ಲಿ ಗಡಿಭಾಗವಾದ ನಿಪ್ಪಾಣಿಯ–ನಾಂಗನೂರನಲ್ಲಿ ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ಪದವಿ ಪೂರ್ವ ವಿಜ್ಞಾನ ವಸತಿ ಮಹಾವಿದ್ಯಾಲಯವನ್ನು ಕಳೆದ ಸನ್ 2025–26 ನೇ ಶೈಕ್ಷಣಿಕ ಸಾಲಿನಿಂದ ಸುಸಜ್ಜಿತ ಹಾಗೂ ಆಧುನಿಕ ಸೌಲಭ್ಯ ಹೊಂದಿದ ಕಟ್ಟಡದಲ್ಲಿ ಕಾರ್ಯಾರಂಭ ಮಾಡಿರುವುದು ಆನಂದದ ಸಂಗತಿ. ಈ ಅಂಗ ಸಂಸ್ಥೆ ವಿದ್ಯಾಕಾಂಕ್ಷಿಗಳಿಗೆ ದಾರಿದೀಪವಾಗಲಿದೆ.

**ಪ್ರಸ್ತುತ ಸನ್ 2026–27ನೇ ಶೈಕ್ಷಣಿಕ ವರ್ಷದಿಂದ ಶ್ರೀಮತಿ ಶಶಿಕಲಾ ಜೊಲ್ಲೆ ಕಾಲೇಜ ಆಫ್ ನರ್ಸಿಂಗ್ ನಣದಿ ಶಿಕ್ಷಣ ಸಂಕುಲದಲ್ಲಿ ಶೀಘ್ರದಲ್ಲಿ ಪ್ರಾರಂಭ–**

ಜೊಲ್ಲೆ ಎಜ್ಯುಕೇಶನ್ ಸೊಸೈಟಿಯು ಗಡಿಭಾಗವಾದ ಯಕ್ಸಂಬಾ ಪಟ್ಟಣದಲ್ಲಿ ಸ್ಥಾಪಿತವಾಗಿ, ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ತನ್ನ ಸೇವೆಯನ್ನು ವಿಸ್ತರಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಪ್ರಸ್ತುತ 2026–27ನೇ ಶೈಕ್ಷಣಿಕ ಸಾಲಿನಿಂದ ವೈದ್ಯಕೀಯ ಕ್ಷೇತ್ರದಲ್ಲಿಯೂ ತನ್ನ ಅಂಗ ಸಂಸ್ಥೆಗಳನ್ನು ಆರಂಭಿಸುವ ದೂರದೃಷ್ಟಿಯೊಂದಿಗೆ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ನೂತನವಾಗಿ ಯಕ್ಸಂಬಾ ಪಟ್ಟಣದ ನನದಿ ಶಿಕ್ಷಣ ಸಂಕುಲದಲ್ಲಿ ಶ್ರೀಮತಿ ಶಶಿಕಲಾ ಜೊಲ್ಲೆ ಕಾಲೇಜ್ ಆಫ್ ನರ್ಸಿಂಗ್ ಅನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುತ್ತಿದೆ ಎಂಬುದು ಸಂತಸದ ವಿಚಾರ. ಈ ಕಾಲೇಜು ನುರಿತ ಹಾಗೂ ಅನುಭವ ಸಂಪನ್ನ ಉಪನ್ಯಾಸಕ ವೃಂದವನ್ನು ಹೊಂದಿದ್ದು, 100 ಹಾಸಿಗೆಗಳ ಆಸ್ಪತ್ರೆ ಸೌಕರ್ಯ, ಆಧುನಿಕ ಉಪಕರಣಗಳು ಮತ್ತು ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ವಿಶೇಷತೆಯನ್ನು ಹೊಂದಿದೆ. ಪ್ರಸ್ತುತ ವರ್ಷದ ದಾಖಲಾತಿ ಪ್ರಕ್ರಿಯೆ ಸಧ್ಯ ಪ್ರಾರಂಭವಿರುತ್ತದೆ.

**ಜೊಲ್ಲೆ ಇಂಡಸ್ಟ್ರಿಜ್ ಕಾರ್ಯಾರಂಭ–**

ನಿಪ್ಪಾಣಿ ಮತಕ್ಷೇತ್ರದ ಗ್ರಾಮೀಣ ಮಹಿಳೆಯರಿಗೆ ಸ್ವ–ಉದ್ಯೋಗ ಮತ್ತು ಭದ್ರತೆಯನ್ನು ಒದಗಿಸಿ ಮಹಿಳಾ ಸಬಲೀಕರಣವನ್ನು ಸಾಧಿಸುವ ನಿಟ್ಟಿನಲ್ಲಿ ನಿಪ್ಪಾಣಿಯ ಕೇಂದ್ರ ಸ್ಥಾನದಲ್ಲಿ ಜೊಲ್ಲೆ ಇಂಡಸ್ಟ್ರಿಜ್ ಪ್ರಾರಂಭಿಸಿ ಅದರ ಅಡಿಯಲ್ಲಿ **"ವೇದಿಕ"** ಹೆಸರಿನ ವಿವಿಧ ಪೂಜಾ ಸಾಮಗ್ರಿಗಳಾದ ಧೂಪ, ಅಗರಬತ್ತಿ, ಕರ್ಪೂರ, ತುಪ್ಪದ ದೀಪಗಳು, ಭೀಮಸೇನ ಕರ್ಪೂರ ಇತ್ಯಾದಿಗಳ ಉತ್ಪಾದನೆ ಮಾಡುವುದರ ಜೊತೆಗೆ ಜಿಲ್ಲೆಯ್ಯಾದ್ಯಂತ ಅತ್ಯಂತ ಬೇಡಿಕೆಯ ಪೂಜಾ ಸಾಮಗ್ರಿಗಳಾಗಿ ಹೊರಹೊಮ್ಮಿರುವುದು ಸಂತಸದ ವಿಚಾರ.

**ಪ್ರೇರಣಾ ಉತ್ಸವ–**

ಕಳೆದ 14 ವರ್ಷಗಳಿಂದ ಡಿಸೆಂಬರ ತಿಂಗಳಲ್ಲಿ ಪ್ರೇರಣಾ ಉತ್ಸವವನ್ನು ಅತೀ ವಿಜೃಂಭನೆಯಿಂದ ವಿವಿಧ ಸಾಂಸ್ಕೃತಿಕ, ಸಾಂಪ್ರದಾಯಿಕ, ಚಟುವಟಿಕೆಗಳೊಂದಿಗೆ ಜರುಗಿಸುವುದರೊಂದಿಗೆ ಸಂಸ್ಥೆಯ ಪ್ರೇರಣಾ ಶಕ್ತಿಯಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಅವರ ಹುಟ್ಟು ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾ ಬಂದಿದೆ. ಈ ಉತ್ಸವದಲ್ಲಿ ವಿಶೇಷವಾಗಿ ವಿಕಲಚೇತನರ ಸಾಧನೆಯನ್ನು ಗುರುತಿಸಿ ಪ್ರೇರಣಾ ಪುರಸ್ಕಾರವನ್ನು ನೀಡಿ ಗೌರವಿಸುತ್ತಾ ಬಂದಿದೆ. ಸಾಮೂಹಿಕ ಗುಗ್ಗುಳೋತ್ಸವವು ಈ ಉತ್ಸವದ ವಿಶೇಷ ಆಕರ್ಷಣೀಯ ಕಾರ್ಯಕ್ರಮವಾಗಿರುತ್ತದೆ. ಭಾರತೀಯ ಸಂಸ್ಕೃತಿ, ಕಲೆ, ಸಾಹಿತ್ಯವನ್ನು ಉಳಿಸಿ ಬೆಳೆಸುವ ಕಾರ್ಯ ಜೊಲ್ಲೆ ಗ್ರೂಪ್ ಮಾಡುತ್ತಿದೆ.

**ಬೆಳಗಾವಿ ಬಿ.ಡಿ.ಸಿ.ಸಿ. ಬ್ಯಾಂಕಿನ ನೂತನ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ –**

ರಾಜ್ಯದ ಪ್ರತಿಷ್ಠಿತ ಬೆಳಗಾವಿ ಜಿಲ್ಲಾ ಮಧ್ಯವರ್ತಿ ಸಹಕಾರಿ (BDCC) ಬ್ಯಾಂಕಿನ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸರ್ವಸಮ್ಮತಿಯಿಂದ ಬೆಂಬಲಿಸಿ, ಅವಿರೋಧವಾಗಿ ಆಯ್ಕೆ ಮಾಡಿದ ಗೌರವಾನ್ವಿತ ನಿರ್ದೇಶಕ ಮಂಡಳಿಯ ಸದಸ್ಯರಿಗೆ, ಸಹಕಾರಿ ಧುರೀಣರಿಗೆ ಹಾಗೂ ಹಿತೈಷಿಗಳಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ. ನನ್ನ ಮೇಲೆ ಇಟ್ಟಿರುವ ಈ ಅಪಾರ ವಿಶ್ವಾಸಕ್ಕೆ ನಾನು ಸದಾ ಋಣಿಯಾಗಿದ್ದೇನೆ. ಬ್ಯಾಂಕಿನ ಸರ್ವತೋಮುಖ ಪ್ರಗತಿ, ಸದಸ್ಯರ ಹಿತರಕ್ಷಣೆ ಹಾಗೂ ಗ್ರಾಹಕರಿಗೆ ಅತ್ಯುತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಸಮರ್ಪಿತ ಮನೋಭಾವದಿಂದ ಕಾರ್ಯನಿರ್ವಹಿಸುವೆನು. ನಿಮ್ಮೆಲ್ಲರ ಸಹಕಾರ, ಪ್ರೋತ್ಸಾಹ ಹಾಗೂ ಮಾರ್ಗದರ್ಶನ ಸದಾ ನನ್ನ ಮೇಲಿರಲಿ ಎಂದು ಆಶಿಸುತ್ತೇನೆ.

**ಧನ್ಯವಾದ ಅರ್ಪಣೆ–**

ಕೊನೆಯದಾಗಿ ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಗಳು ವಿವಿಧ ಕ್ಷೇತ್ರಗಳಲ್ಲಿ ತನ್ನ ಸಾಮಾಜಿಕ ಸೇವೆಯನ್ನು ಸಲ್ಲಿಸುವಲ್ಲಿ ನಿರಂತರ ಸಹಾಯ ಸಹಕಾರ ನೀಡುತ್ತಿರುವ ಎಲ್ಲ ಸದಸ್ಯ ಬಾಂಧವರಿಗೂ, ಗ್ರಾಹಕರಿಗೂ, ನಿರ್ದೇಶಕ ಮಂಡಳಿಯ ಸದಸ್ಯರಿಗೂ, ಶಾಖಾ ಸಲಹಾ ಸಮಿತಿ ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ, ಹಿತಚಿಂತಕರಿಗೂ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲ ಮಹನೀಯರಿಗೂ ಧನ್ಯವಾದಗಳು. ಮುಂಬರುವ ದಿನಮಾನಗಳಲ್ಲಿ ಇದೇ ರೀತಿಯ ಸಹಾಯ ಸಹಕಾರ ಇರಲೆಂದು ಆಶಿಸುತ್ತೇವೆ.

ಜೈ ಸಹಕಾರ

**ಶ್ರೀ. ಅಣ್ಣಾಸಾಹೇಬ ಶಂಕರ ಜೊಲ್ಲೆ**
ಸಂಸ್ಥಾಪಕರು ಜೊಲ್ಲೆ ಗ್ರೂಪ್ ಯಕ್ಸಂಬಾ,

## ಜ್ಯೋತಿ ಕ್ರೆಡಿಟ್ ಶಾಖೆಗಳು

| ಬೆಳಗಾವಿ ಜಿಲ್ಲೆ | | |
|---|---|---|
| 1. | ಯಕ್ಸಂಬಾ | 9900559867 |
| 2. | ಶಿವಾಪೂರವಾಡಿ | 7338059004 |
| 3. | ಭಿರಡಿ | 7348859003 |
| 4. | ಸೋಲ್ಲಾಪೂರ | 7349088004 |
| 5. | ಜಲಾಲಪೂರ | 7348979005 |
| 6. | ಘಟಪ್ರಭಾ | 7348961006 |
| 7. | ಮಾಂಜರಿ | 9606992007 |
| 8. | ಉಗಾರ ಬುದ್ರುಕ | 9606992008 |
| 9. | ಐಗಳಿ | 9606992009 |
| 10. | ಅಳಗವಾಡಿ | 9606992010 |
| 11. | ಸತ್ತಿ | 9972292011 |
| 12. | ಅಂಕಲಿ | 9606978512 |
| 13. | ಶಮನೇವಾಡಿ | 9606978513 |
| 14. | ಹೆಬ್ಬಾಳ | 9606700914 |
| 15. | ನಿಡಸೋಶಿ | 9606400915 |
| 16. | ಮುಗಳಖೋಡ | 9606400816 |
| 17. | ಬೂದಿಹಾಳ | 9606500817 |
| 18. | ಕುಲಗೋಡ | 9606400818 |
| 19. | ಹಳ್ಳೂರ | 9606400819 |
| 20. | ಹಂದಿಗುಂದ | 9606400820 |
| 21. | ನಾಗನೂರ | 9606400821 |
| 22. | ಕಾಕತಿ | 9663702322 |
| 23. | ಪಾಶ್ಚಾಪೂರ | 9663703123 |
| 24. | ಅಂಕಲಗಿ | 9663752324 |
| 25. | ಖಡಕಲಾಟ | 9663782225 |
| 26. | ಮುರಗೋಡ | 9663752526 |
| 27. | ಮಣಗುತ್ತಿ | 9606044527 |
| 28. | ಬೆಳವಡಿ | 9606044530 |
| 29. | ಎಮ್.ಕೆ.ಹುಬ್ಬಳ್ಳಿ | 9606044531 |
| 30. | ಬೆಳಗಾವಿ–1 (ಮಹಾಂತೇಶ ನಗರ) | 9606044532 |
| 31. | ಕೊಕಟನೂರ | 9606044534 |
| 32. | ನೇಸರಗಿ | 9606044536 |
| 33. | ಸುಲ್ತಾನಪೂರ | 9606044540 |
| 34. | ಹಿರೇಬಾಗೇವಾಡಿ | 9731571746 |
| 35. | ಇಟಗಿ | 9606914647 |
| 36. | ಗೋಕಾಕ | 9606914648 |
| 37. | ಸಂಕೇಶ್ವರ | 9606914649 |
| 38. | ಅನಂತಪೂರ | 9606914654 |
| 39. | ಬೆಳಗಾವಿ–2 (ಶಹಾಪೂರ) | 9606914655 |
| 40. | ಮಮದಾಪೂರ | 9900683756 |
| 41. | ಗುಡಸ | 9900658757 |
| 42. | ಮದಭಾವಿ | 9900658958 |
| 43. | ದಡ್ಡಿ | 9900658561 |
| 44. | ಘೋಡಗೇರಿ | 9900644862 |
| 45. | ನಾಯಿಂಗ್ಲಜ | 9900374863 |
| 46. | ನಿಪ್ಪಾಣಿ | 8296361302 |

| ವಿಜಯಪೂರ ಜಿಲ್ಲೆ | | |
|---|---|---|
| 1. | ವಿಜಯಪೂರ | 9606044533 |
| 2. | ಇಂಡಿ | 9606044528 |
| 3. | ಆಲಮೇಲ | 9606044529 |
| 4. | ಮುದ್ದೇಬಿಹಾಳ | 9606044539 |
| 5. | ನಾಲತವಾಡ | 9731578642 |
| 6. | ನಿಡಗುಂದಿ | 9731578643 |

| ಬಾಗಲಕೋಟ ಜಿಲ್ಲೆ | | |
|---|---|---|
| 1. | ಢವಳೇಶ್ವರ | 9606044535 |
| 2. | ಅಮೀನಗಡ | 9606044537 |
| 3. | ಬಾಗಲಕೋಟ | 9606044538 |
| 4. | ಕಮತಗಿ | 9731578641 |
| 5. | ಹುನ್ನೂರ | 8861554344 |
| 6. | ಜಗದಾಳ | 9731578645 |
| 7. | ಬೆಳಗಲಿ | 9606914652 |
| 8. | ಬಾದಾಮಿ | 9606914653 |
| 9. | ಮುಧೋಳ | 9900652859 |
| 10. | ಲೋಕಾಪುರ | 9900641960 |

| ಗದಗ ಜಿಲ್ಲೆ | | |
|---|---|---|
| 1. | ಗಜೇಂದ್ರಗಡ | 9606914650 |

| ಧಾರವಾಡ ಜಿಲ್ಲೆ | | |
|---|---|---|
| 1. | ನವಲಗುಂದ | 9606914651 |

## ಜ್ಯೋತಿ ಬಜಾರ ಶಾಖೆಗಳು

| | | |
|---|---|---|
| 1. | ಯಕ್ಸಂಬಾ | 7022589483 |
| 2. | ಯಕ್ಸಂಬಾ–2 | 8197534777 |
| 3. | ಸದಲಗಾ | 9740024625 |
| 4. | ಭೋಜ | 9900559868 |
| 5. | ಗಳತಗಾ | 9686503416 |
| 6. | ಚಿಕ್ಕೋಡಿ | 9900559872 |
| 7. | ಸಂಕೇಶ್ವರ | 9900553061 |
| 8. | ನಣದಿ | 9686500580 |
| 9. | ಸಿ.ಬಿ.ಕೆ.ಎಸ್.ಎಸ್.ಕೆ. | 9900559871 |
| 10. | ಕೇರೂರ | 8861786946 |
| 11. | ಅಂಕಲಿ | 8861786949 |
| 12. | ನಿಪ್ಪಾಣಿ–1 | 9900649871 |
| 13. | ನಿಪ್ಪಾಣಿ–2 (ಹಾಲಸಿದ್ಧನಾಥ) | 9900279364 |
| 14. | ಜ್ಯೋತಿ ಎಲೆಕ್ಟ್ರಾನಿಕ್ಸ್ | 9900246898 |

## ಇತರೆ ಶಾಖೆಗಳು

| | | |
|---|---|---|
| 1. | ಬಟ್ಟೆ ವಿಭಾಗ, ಯಕ್ಸಂಬಾ | 7022589482 |
| 2. | ಮೆಡಿಕಲ್ ವಿಭಾಗ, ಯಕ್ಸಂಬಾ | 9900559869 |
| 3. | ಹೊಲಸೆಲ್ ಯಕ್ಸಂಬಾ | 9900559866 |
| 4. | ಪ್ರಿಂಟಿಂಗ್ ಪ್ರೆಸ್, ನಣದಿ | 7760983792 |

# AUDIT CERTIFICATE 2025-2026

**To,**

**The Members,**

**SHRI JYOTI VIVIDH UDDESHAGALA SOUHARD SAHAKARI SANGH NYT., EXAMBA.**

**Tal: Chikodi, Dist: Belgaum.**

Report On the Financial Statements

We have audited the accompanying financial statements of Shri Jyoti Multipurpose Souhard Sahakari Sangh Nyt., Examba which comprise the Balance Sheet as on 31st March 2026, and the Statement of Profit and Loss for the year then ended and a summary of significant accounting policies and other explanatory information, in which are incorporated the statements of HO and branches.

**Management Responsibility for the Financial Statements**

The management is responsible for the preparation of these statements that give a true and fair view of the financial position and performance of the society in accordance with the Accounting Standards issued by the Institute of Chartered Accountants of India. The responsibility includes the design, implementation and maintenance of internal control relevant to the preparation of the financial statements that give a true and fair view and are free from material misstatement, whether due to fraud or error.

**Auditors' Responsibility**

Our responsibility is to express an opinion on these financial statements based on our audit. We conducted our audit in accordance with the standards on Auditing issued by the Institute of Chartered Accountants of India. Those standards require that we comply with ethical requirements and plan and perform the audit to obtain reasonable assurance about whether the financial statements are free from material misstatement.

An audit involves performing procedures to obtain audit evidence about the amounts and disclosures in the financial statements. The procedures selected depend on the auditor's judgment, including the assessment of the risk of material misstatement of the financial statements, whether due to fraud or error. In making those risk assessment, the auditor considers internal control relevant to the society's preparation and fair presentation of the financial statements in order to design audit procedures that are appropriateness of accounting policies used and the reasonableness of the accounting estimates made by the management, as well as evaluating the overall presentation of the financial statements. We believe that the audit evidence we have obtained is sufficient and appropriate to provide a basis for our audit opinion.

**Opinion**

In our opinion and to the best of our information and according to the explanations given to us and subject to our comments and observations contained in the Separate Audit Report with Annexures, the financial statements give the information required by the Act in the manner so required and given in India:

a) In the case of Balance Sheet, of the state of affairs of the Society as on 31st March 2026.

b) In the case of the Profit and Loss Account of the profit for the year ended on that date.

**Report on Other Legal and Regulatory Requirements**

1. Subject to our comments and observations contained in Separate Audit Report with Annexures, we report that:

   a) We have obtained all the information and explanations which to the best of our knowledge and belief were necessary for the purpose of our audit.

   b) In our opinion proper books of account as required by The Karnataka Souhard Sahakari Act, 1997 and Bye-Laws of the society, have been kept by the society so far as appears from our examination of those books and proper returns adequate for the purpose of audit have been received from the branches.

   c) The Balance Sheet and Statement of Profit & Loss dealt with by this Report are in agreement with the books of accounts.

   d) On the basis of written representation received from the Directors of the Society and taken on record by the Board of Directors, we report that none of the Directors is disqualified as on 31st March 2026 from being appointed as Director as per The Karnataka Souhard Sahakari Act, 1997.

   e) In our opinion, the Balance Sheet and the Profit & Loss Account dealt with by this report comply with Accounting Standards issued by the institute of Chartered Accountants of India in so far as they apply the Co-operative Society expect the

**following:**

Prior period Items (AS 5):There is no practice of disclosing prior period items separately in Profit & Loss Account as required by Accounting Standard 5. Such amounts have been included in their natural heads of account and not separately disclosed in a manner that their impact on the financial results for the year can be perceived. The quantum is not ascertainable.

Employee Benefits (As 15): Separate disclosure of the employee benefits as laid down at the Accounting Standard (As 15) remains to be made in the financial statements.

Accounting for Taxes on Income (As 22): The deferred tax assets and deferred tax liabilities arising out of the timing difference remain to be recognized in the financial statements.

BELAGAVI.

DATE : 15 - 04 - 2026

For M/s V. I. KARHADKAR & Co.
Chartered Accountants
CA V.I. KARHADKAR
(Partner)
M.No.: 013623, F.R.N0.: 001744S)

ಶ್ರೀ ಜ್ಯೋತಿ

## ಸನ್ಮಾನ್ಯ ಸಹಕಾರಿ ಸಂಘದ ಸದಸ್ಯ ಬಾಂಧವರೇ,

ನಮ್ಮ ಸಹಕಾರಿ ಸಂಘದ 32ನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಮೊದಲಿಗೆ ನಮ್ಮ ಹೆಮ್ಮೆಯ ಸಂಸ್ಥಾಪಕರು ಮತ್ತು ಬಿ.ಡಿ.ಸಿ.ಸಿ. ಬ್ಯಾಂಕ ಬೆಳಗಾವಿ ಇದರ ನೂತನ ಅಧ್ಯಕ್ಷರು ಆದ ಸನ್ಮಾನ್ಯ ಶ್ರೀ ಅಣ್ಣಾಸಾಹೇಬ ಶಂಕರ ಜೊಲ್ಲೆ ಹಾಗೂ ನಮ್ಮ ಹೆಮ್ಮೆಯ ಸಹ-ಸಂಸ್ಥಾಪಕರು, ನಿಪ್ಪಾಣಿ ಕ್ಷೇತ್ರದ ಜನಪ್ರಿಯ ಶಾಸಕರು, ಘನ ಕರ್ನಾಟಕ ಸರಕಾರದ ಮಾಜಿ ಸಚಿವರು ಆದ ಸನ್ಮಾನ್ಯ ಸೌ. ಶಶಿಕಲಾ ಅ. ಜೊಲ್ಲೆ ದಂಪತಿಗಳು ನಮ್ಮ ಕರ್ನಾಟಕ ಕಂಡ ಸರ್ವಶ್ರೇಷ್ಠ ಧೀಮಂತ ನಾಯಕರುಗಳಲ್ಲಿ ಒಬ್ಬರಾಗಿದ್ದಾರೆ. ಜನಪರ ಕಾಳಜಿಯನ್ನು ಮೈಗುಡಿಸಿಕೊಂಡಿರುವ ಇವರು ಸಮಾಜದ ಅಭಿವೃದ್ಧಿಗೆ ನೀಡಿದ ಕೊಡುಗೆ ಅಪಾರವಾದದ್ದು. ಸಮಾಜದ ಹಿತ ಚಿಂತನೆಯಲ್ಲಿ ಯಾವತ್ತೂ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ಹಲವಾರು ಸಂಘ-ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಗ್ರಾಮೀಣ ಜನರ ಬದುಕಿಗೆ ಬೆಳಕಾಗಿದ್ದಾರೆ. ಯುವ ಮತ್ತು ಮಹಿಳಾ ಸಬಲೀಕರಣದ ಹೊಣೆ ಹೊತ್ತು, ಕೃಷಿ, ಆರ್ಥಿಕ, ಧಾರ್ಮಿಕ, ಔದ್ಯೋಗಿಕ, ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡೆ, ಸಹಕಾರ ಹಾಗೂ ಸಾಮಾಜಿಕ ಮುಂತಾದ ಕ್ಷೇತ್ರಗಳಿಗೆ ಅಪಾರ ಕೊಡುಗೆಗಳನ್ನು ನೀಡುತ್ತಾ ಬಂದಿರುತ್ತಾರೆ. ಇವರಿಗೆ ನಮ್ಮ ಶ್ರೀ ಜ್ಯೋತಿ ಸಹಕಾರಿ ಸಂಘದ ಎಲ್ಲ ನಿರ್ದೇಶಕ ಮಂಡಳಿ, ಪದಾಧಿಕಾರಿಗಳು ಹಾಗೂ ಸಿಬ್ಬಂಧಿ ವರ್ಗದವರುಗಳ ಪರವಾಗಿ ತುಂಬು ಹೃದಯದ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇನೆ.

ಇನ್ನು ಮುಂದೆ ಸನ್ 2025-26ನೇ ಸಾಲಿಗೆ ಕೊನೆಗೊಂಡ ಆರ್ಥಿಕ ವರ್ಷದ ಲೆಕ್ಕ ಪತ್ರದ ಹಾಗೂ ವ್ಯವಹಾರದ ವರದಿಯನ್ನು ನಿರ್ದೇಶಕ ಮಂಡಳಿಯ ಪರವಾಗಿ ತಮ್ಮ ಮುಂದೆ ಮಂಡಿಸುತ್ತಿದ್ದು, ಅದಕ್ಕೆ ತಮ್ಮ ಅನುಮೋದನೆಯನ್ನು ಕೋರುತ್ತೇನೆ.

### ಸದಸ್ಯರು

ದಿನಾಂಕ 31-03-2025 ರ ಆರ್ಥಿಕ ವರ್ಷದ ಕೊನೆಗೆ ಸದಸ್ಯರ ಸಂಖ್ಯೆ 43,176 ಇದ್ದದ್ದು, ದಿ: 31-03-2026 ಕ್ಕೆ ಒಟ್ಟು ಸದಸ್ಯರ ಸಂಖ್ಯೆ 52,426 ಏರಿಕೆಯಾಗಿದೆ. ಅಂದರೆ 9,250 ಜನ ನೂತನವಾಗಿ ಸದಸ್ಯತ್ವವನ್ನು ಹೊಂದಿದ್ದಾರೆ.

### ಶೇರಬಂಡವಾಳ

ಆರ್ಥಿಕ ವರ್ಷ 31-03-2026 ರ ಕೊನೆಗೆ ನಮ್ಮ ಸಹಕಾರಿ ಸಂಘದ ಶೇರು ಬಂಡವಾಳ ರೂ. 2 ಕೋಟಿ 79 ಲಕ್ಷ 35 ಸಾವಿರ ಇರುತ್ತದೆ. ಕಳೆದ ವರ್ಷಕ್ಕೆ ಹೋಲಿಸಲಾಗಿ ರೂ. 40 ಲಕ್ಷ 36 ಸಾವಿರ ರಷ್ಟು ಹೆಚ್ಚಳವಾಗಿದೆ.

### ನಿಧಿಗಳು

ಆರ್ಥಿಕ ವರ್ಷದ ಕೊನೆಗೆ ಕಾಯ್ದಿಟ ನಿಧಿ, ಕಟ್ಟಡ ನಿಧಿ, ಶಿಕ್ಷಣ ನಿಧಿ, ಸದಸ್ಯರ ಕ್ಷೇಮ ನಿಧಿ, ನೌಕರರ ಕ್ಷೇಮ ನಿಧಿ, ಸವಕಳಿ ನಿಧಿ, ಹಾಗೂ ಇನ್ನುಳಿದ ನಿಧಿಗಳು ಸೇರಿ ಒಟ್ಟು ರೂ 13 ಕೋಟಿ 21 ಲಕ್ಷ 04 ಸಾವಿರ ಜಮಾ ಇರುತ್ತದೆ.

### ಠೇವು

ದಿ. 31-03-2025 ರ ಆರ್ಥಿಕ ವರ್ಷದ ಕೊನೆಗೆ 331 ಕೋಟಿ 83 ಲಕ್ಷ ಇದ್ದ ವಿವಿಧ ಠೇವುಗಳು ದಿ. 31-03-2026 ಕ್ಕೆ 424 ಕೋಟಿ 67 ಲಕ್ಷ ಆಗಿರುತ್ತದೆ. ಅಂದರೆ ಸುಮಾರು 92 ಕೋಟಿ 84 ಲಕ್ಷ ರೂ. ಠೇವು ಸಂಗ್ರಹಣೆ ಹೆಚ್ಚಾಗಿದ್ದು, ದಾಖಲೆಯ ಠೇವು ಸಂಗ್ರಹ ಶೇ. 27.98% ರಷ್ಟು ಹೆಚ್ಚಳವಾಗಿದೆ.

### ಸಾಲ ಮತ್ತು ಮುಂಗಡಗಳು

ಸಹಕಾರಿ ಸಂಘದ ಸದಸ್ಯರಿಗೆ ಸದಸ್ಯ ಸಾಲ, ಮಾಧ್ಯಮಿಕ ಸಾಲ, ವಾಹನ ಸಾಲ, ನಗದು ಪತ್ತಿನ ಸಾಲ, ಜೆ.ಸಿ.ಸಿ. ಸಾಲ ಜ್ಯೋತಿ ಕಿರು ಸಾಲ, ಬಂಗಾರದ ಸಾಲ ಇತ್ಯಾದಿ ಸಾಲ ನೀಡುತ್ತಿದ್ದು ದಿನಾಂಕ : 31-03-2025 ಕ್ಕೆ 163 ಕೋಟಿ 85 ಲಕ್ಷ ರೂ. ಇದ್ದ ಸಾಲವು ದಿನಾಂಕ 31-03-2026 ಕ್ಕೆ 254 ಕೋಟಿ 25 ಲಕ್ಷ ರೂ. ಆಗಿರುತ್ತದೆ. ಅಂದರೆ ಸುಮಾರು 90 ಕೋಟಿ 39 ಲಕ್ಷ ರೂ ಹೆಚ್ಚಿಗೆ ಸಾಲವನ್ನು ಪ್ರಸಕ್ತ ವರ್ಷದಲ್ಲಿ ವಿತರಿಸಲಾಗಿದೆ.

### ಗುಂತಾವಣಿಗಳು

ವಿವಿಧ ಸಂಘ-ಸಂಸ್ಥೆಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ವಿನಿಯೋಗಿಸಿದ ಗುಂತಾವಣಿ ಹಾಗೂ ಕರೆ ಮುದ್ದತ್ ಠೇವು ಸೇರಿ ದಿನಾಂಕ 31-03-2026 ಕ್ಕೆ ಒಟ್ಟು 136 ಕೋಟಿ 96 ಲಕ್ಷ ಇರುತ್ತದೆ.

### ಖರೀದಿ

ದಿನಾಂಕ 31-03-2026 ಕ್ಕೆ 22 ಕೋಟಿ 43 ಲಕ್ಷ ರೂ. ಪ್ರಸಕ್ತ ವರ್ಷದಲ್ಲಿ ಖರೀದಿಯಾಗಿರುತ್ತದೆ.

### ಮಾರಾಟ

ದಿನಾಂಕ 31-03-2026 ಕ್ಕೆ 25 ಕೋಟಿ 07 ಲಕ್ಷ ರೂ. ಪ್ರಸಕ್ತ ವರ್ಷದಲ್ಲಿ ಮಾರಾಟವಾಗಿರುತ್ತದೆ.

### ಲಾಭ

ಆರ್ಥಿಕ ವರ್ಷ 2025-26 ರಲ್ಲಿ ರೂ 02 ಕೋಟಿ 01 ಲಕ್ಷ ಲಾಭ ಆಗಿರುತ್ತದೆ.

**ಶಾಖೆಗಳು**

ಸಹಕಾರಿ ಸಂಘವು ಕರ್ನಾಟಕ ರಾಜ್ಯಾದ್ಯಂತ ಒಟ್ಟಾರೆ 82 ಶಾಖೆಗಳನ್ನು ಹೊಂದಿದ್ದು. ಜಿಲ್ಲಾವಾರು ಶಾಖೆಗಳ ವಿವರ :
ಬೆಳಗಾವಿ ಜಿಲ್ಲೆ – 64, ಧಾರವಾಡ ಜಿಲ್ಲೆ – 01, ಬಾಗಲಕೋಟ ಜಿಲ್ಲೆ– 10, ವಿಜಯಪುರ ಜಿಲ್ಲೆ – 06, ಗದಗ ಜಿಲ್ಲೆ – 01.
ಶಾಖಾ ಸಲಹಾ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸಲಹಾ ಸಮಿತಿ ಸದಸ್ಯರ ಮಾರ್ಗದರ್ಶನದಲ್ಲಿ ಮತ್ತು ಸಿಬ್ಬಂದಿ ವರ್ಗದವರ ಅವಿರತ ಸೇವೆ ಹಾಗೂ ಸದಸ್ಯರ ಪ್ರೀತಿ ವಿಶ್ವಾಸದಿಂದ ಶಾಖೆಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಲು ಅತೀವ ಸಂತೋಷವೆನಿಸುತ್ತದೆ.

**ಆಡಳಿತ ಸಭೆ**

ವರದಿ ವರ್ಷದಲ್ಲಿ ಆಡಳಿತ ಕಛೇರಿಯ ನಿರ್ದೇಶಕ ಮಂಡಳಿಯ 37 ಸಭೆಗಳು ಮತ್ತು ಸಾಲ ಸಮಿತಿಯ 22 ಸಭೆಗಳು ನಡೆದಿರುತ್ತವೆ ಹಾಗೂ ಎಲ್ಲಾ ಶಾಖೆಗಳ ಸಲಹಾ ಸಮಿತಿಯ ಸದಸ್ಯರು ಸಭೆಗಳನ್ನು ಜರುಗಿಸಿ ಸಂಸ್ಥೆಯ ದೈನಂದಿನ ಕಾರ್ಯಗಳಲ್ಲಿ ಭಾಗವಹಿಸಿ, ಸಹಕಾರಿ ಸಂಘವು ಪ್ರಗತಿಪಥದತ್ತ ನಡೆಯುವಲ್ಲಿ ಮಹತ್ವದ ಪಾತ್ರ ವಹಿಸಿರುತ್ತಾರೆ.

**ಕೋರ್ ಬ್ಯಾಂಕಿಂಗ್ ವ್ಯವಸ್ಥೆ– ಗಣಕೀಕರಣ**

ಡಾಟಾ ಸೆಂಟರ್‌ಗಳ ಮೂಲಕ ಕೋರ್ ಅರ್ಥ ವ್ಯವಸ್ಥೆಯನ್ನು ಸಂಘದ ಕ್ರೆಡಿಟ ವಿಭಾಗದ 64 ಶಾಖೆಗಳಲ್ಲಿ ಅಳವಡಿಸುವದರ ಮೂಲಕ ಸಹಕಾರ ಕ್ಷೇತ್ರದಲ್ಲಿ ಹೊಸ ಹೆಜ್ಜೆಯನ್ನು ಇಟ್ಟಿದ್ದೇವೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಕೋರ್ ಅರ್ಥವ್ಯವಸ್ಥೆಯಲ್ಲಿ ಗ್ರಾಹಕರು ಯಾವುದೇ ಶಾಖೆಯಿಂದ ಹಣ ವರ್ಗಾವಣೆ ಹಾಗೂ ಜಮಾ ಮಾಡಬಹುದಾಗಿದೆ. ಬ್ಯಾಂಕುಗಳ ಸಹಯೋಗದೊಂದಿಗೆ ನಮ್ಮ ಸದಸ್ಯ ಗ್ರಾಹಕರು ತಮ್ಮ ಖಾತೆಯಿಂದ ಯಾವುದೇ ಬ್ಯಾಂಕಿಗೆ NEFT & RTGS ಮುಖಾಂತರ ಹಣ ವರ್ಗಾವಣೆ ಮಾಡಬಹುದಾಗಿದೆ. ಅದೇ ರೀತಿ ರಾಷ್ಟ್ರೀಕೃತ ಬ್ಯಾಂಕ ಮತ್ತು ಪ್ರೈವೆಟ್ ಬ್ಯಾಂಕುಗಳಿಂದ ನಮ್ಮ ಸಹಕಾರಿ ಸಂಘದ ಉಳಿತಾಯ ಹಾಗೂ ಚಾಲತಿ ಖಾತೆಗಳಿಗೆ NEFT & RTGS, IMPS(Inward) ಮಾಡಬಹುದಾಗಿದೆ. ಸಾಲವನ್ನು ತ್ವರಿತಗತಿಯಲ್ಲಿ ಗ್ರಾಹಕರಿಗೆ ಮಂಜೂರು ಮಾಡುವುದರಗೋಸ್ಕರ ಆನ್‌ಲೈನ್ ಲೋನ್ ಕ್ರೆಡ್‌ಪೂಲ್ ಸಾಫ್ಟವೇರನ್ನು ಪ್ರಾರಂಭಿಸಿದ್ದು. ಇದರಿಂದ ಸಾಫ್ಟವೇರ ಮುಖಾಂತರ ಗ್ರಾಹಕರಿಗೆ ತ್ವರಿತವಾಗಿ ಸಾಲ ಸೌಲಭ್ಯ ಲಭ್ಯವಾಗುತ್ತಿದೆ. ಸದಸ್ಯ ಗ್ರಾಹಕರಿಗೆ ಪಾರದರ್ಶಕ, ತ್ವರಿತ ಹಾಗೂ ಸ್ಥಳೀಯ ಸೇವೆ ಒದಗಿಸುವುದು ನಮ್ಮ ಸಹಕಾರಿ ಸಂಘದ ಮುಖ್ಯ ಧ್ಯೇಯವಾಗಿದೆ.

**ಸಾಲ ವಸೂಲಾತಿ**

ವರದಿ ವರ್ಷದಲ್ಲಿ ಸಹಕಾರಿ ಸಂಘದ ಸಾಲ ವಸೂಲಾತಿಯು ತೃಪ್ತಿದಾಯಕವಾಗಿದ್ದು, ಸಾಲ ಖಟಬಾಕಿ ಪ್ರಮಾಣವು ಹೆಚ್ಚಾಗದಂತೆ ನಿಗಾವಹಿಸುತ್ತಿದ್ದೇವೆ. ಸಾಲಗಾರರು ನಮ್ಮ ಸಿಬ್ಬಂದಿಯೊಂದಿಗೆ ಸಹಕರಿಸಿ ಸಾಲ ಮರುಪಾವತಿಯನ್ನು ಸಕಾಲದಲ್ಲಿ ಮಾಡಿ ಖಟಬಾಕಿ ಪ್ರಮಾಣವನ್ನು ಕಡಿಮೆಗೊಳಿಸಲು ನಿರ್ದೇಶಕ ಮಂಡಳಿಯ ಪರವಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

**ಅಭಿನಂದನೆಗಳು**

ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಉಪನಿಬಂಧಕರು ಬೆಳಗಾವಿ, ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿಕ್ಕೋಡಿ, ಇವರು ನಮ್ಮ ಸಹಕಾರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಸಂಘದ ಅಭಿವೃದ್ಧಿಗೆ ಸಹಕರಿಸಿದ್ದಕ್ಕಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಸನ್ 2025–26 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯನ್ನು ಮಾಡಿದ ಮೆ॥ ವಿ. ಐ ಕರಾಡಕರ ಮತ್ತು ಕಂಪನಿ ಚಾರ್ಟರ್ಡ್ ಅಕೌಂಟಂಟ್ ಅವರಿಗೆ ಅಭಿನಂದಿಸುತ್ತಾ, ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಸಹಕರಿಸಿದ್ದಕ್ಕಾಗಿ ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು. ನಮ್ಮ ಸಹಕಾರಿ ಖಾತೆ ಹೊಂದಿದ ಎಲ್ಲ ಬ್ಯಾಂಕುಗಳ ವ್ಯವಸ್ಥಾಪಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಹಣಕಾಸಿನ ವ್ಯವಹಾರಕ್ಕೆ ಸಹಕರಿಸಿದಕ್ಕಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಜೀವ ವಿಮೆ, ಆರೋಗ್ಯ ವಿಮೆ, ಸಾಮಾನ್ಯ ವಿಮೆ ಹಾಗೂ ಮ್ಯುಚ್ಯುವಲ್ ಫಂಡ್ ಕಂಪನಿಗಳ ಎಲ್ಲ ಅಧಿಕಾರಿಗಳಿಗೆ ಮತ್ತು ನಮ್ಮ ಸಹಕಾರಿಯ ಜೊತೆ ಒಡಂಬಡಿಕೆ ಮಾಡಿಕೊಂಡ ಎಲ್ಲ ಕಂಪನಿಗಳ ಅಧಿಕಾರಿಗಳಿಗೂ ಸಹ ಹೃತ್ಪೂರ್ವಕ ಅಭಿನಂದನೆಗಳು. ಸದಸ್ಯರಿಗೆ ಕೊನೆಯದಾಗಿ ನಮ್ಮ ಸಹಕಾರಿಯ ಸರ್ವೋತೋಮುಖ ಅಭಿವೃದ್ಧಿಗೆ ಸಹಾಯಕರಾದ ಸರ್ವ ಸದಸ್ಯ ಗ್ರಾಹಕರಿಗೆ, ಹಿತಚಿಂತಕರಿಗೆ ಋಣಿಯಾಗಿದ್ದೇನೆ. ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತಿರುವ ಸಹಕಾರಿಯ ಸರ್ವ ಸಿಬ್ಬಂದಿಗೆ, ನಮ್ಮ ಸಹಕಾರಿಯ ಪ್ರಗತಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲ ಸಂಘ ಸಂಸ್ಥೆಗಳಿಗೂ ಎಲ್ಲ ಮಹಾನುಭಾವಿಗಳಿಗೂ ಚಿರಋಣಿಯಾಗಿದ್ದೇನೆ.

ಜೈ ಸಹಕಾರ

ನಿರ್ದೇಶಕ ಮಂಡಳಿಯ ಪರವಾಗಿ

**ಶ್ರೀ ಬಾಬುರಾವ ಎನ್. ಮಾಳಿ**
ಅಧ್ಯಕ್ಷರು

# ಕ್ರೂಢಿಕೃತ ಅಢಾವೆ ಪತ್ರಿಕೆ ದಿ. 31 ಮಾರ್ಚ 2026 ಕ್ಕೆ ಇದ್ದಂತೆ

| 31–03–2025 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿ | 31–03–2026 ರೂ. ಪೈ. |
|---|---|---|
| 4,00,00,000.00 | ಅಧಿಕೃತ ಶೇಅರ ಬಂಡವಾಳ | 4,00,00,000.00 |
| 2,38,98,600.00 | ಶೇಅರ ಬಂಡವಾಳ | 2,79,35,100.00 |
| 10,47,73,472.61 | ಕಾಯ್ದಿಟ್ಟ ಮತ್ತು ಇತರ ನಿಧಿಗಳು | 13,21,04,063.31 |
| 331,83,26,133.80 | ಠೇವುಗಳು | 424,67,92,090.11 |
| 4,44,69,615.69 | ಇತರೆ ಹೊಣೆಗಾರಿಕೆಗಳು | 7,29,91,153.92 |
| 148,29,75,133.19 | ಶಾಖೆಗಳ ಹೊಂದಾಣಿಕೆ | 152,44,19,867.01 |
| 1,72,69,697.70 | ನಿವ್ವಳ ಲಾಭ | 2,01,21,678.00 |
| **499,17,12,652.99** | | **602,43,63,952.35** |

## ಕ್ರೂಢಿಕೃತ ಅಢಾವೆ ಪತ್ರಿಕೆ ದಿ. 31 ಮಾರ್ಚ 2026 ಕ್ಕೆ ಇದ್ದಂತೆ

| 31–03–2025 ರೂ. ಪೈ. | ಆಸ್ತಿ ಮತ್ತು ಜಿಂದಗಿ | 31–03–2026 ರೂ. ಪೈ. |
|---|---|---|
| 5,85,96,713.83 | ನಗದು ಶಿಲ್ಕು | 5,07,69,428.67 |
| 4,96,94,557.13 | ಬ್ಯಾಂಕ ಶಿಲ್ಕು | 8,78,56,540.61 |
| 124,23,44,354.41 | ಗುಂತಾವಣೆಗಳು | 128,18,45,104.03 |
| 163,85,16,781.00 | ಸಾಲಗಳು | 254,25,08,818.35 |
| 3,64,80,213.14 | ಇತರೆ ಆಸ್ತಿಗಳು | 4,10,94,242.40 |
| 5,50,79,042.05 | ಡೆಡ್ ಸ್ಟಾಕ್ ಹಾಗೂ ಪೀಠೋಪಕರಣಗಳು | 5,62,08,866.05 |
| 22,82,66,031.66 | ಪ್ರಸ್ತುತ ಸ್ವತ್ತುಗಳು | 22,87,91,577.19 |
| 2,79,14,196.50 | ಇತರೆ ಬರತಕ್ಕವುಗಳು | 3,91,18,045.65 |
| 17,18,45,630.08 | ಇತರ ಮುಂಗಡಗಳು | 17,17,51,462.39 |
| 148,29,75,133.19 | ಶಾಖೆಗಳ ಹೊಂದಾಣಿಕೆ | 152,44,19,867.01 |
| **499,17,12,652.99** | | **602,43,63,952.35** |

ಶ್ರೀ ಟಿ. ಎಸ್. ಶಿಂದೆ
ಲೆಕ್ಕಾಧಿಕಾರಿ

ಶ್ರೀ ಎಸ್. ಎಸ್. ಪಾಟೀಲ
ಪ್ರಧಾನ ವ್ಯವಸ್ಥಾಪಕರು
(ಪ್ರಭಾರ)

ಶ್ರೀ ಎ. ಎಸ್. ಜೊಲ್ಲೆ
ಸಂಸ್ಥಾಪಕರು

ಶ್ರೀ ಬಿ. ಎನ್. ಮಾಳಿ
ಚೇಅರಮನರು

ಲೆಕ್ಕ ಪರಿಶೋಧಕರು,
ಮೆ॥ ಎ. ಐ ಕರಾಡಕರ ಮತ್ತು ಕಂ.
ಸಿ.ಎ. ಬೆಳಗಾವಿ

# ಕ್ರೂಢಿಕೃತ ಲಾಭ ಹಾನಿ ಪತ್ರಿಕೆ ದಿ. 31 ಮಾರ್ಚ 2026 ಕ್ಕೆ ಇದ್ದಂತೆ

| ಆದಾಯ | ರೂ. ಪೈ. | ಖರ್ಚಿನ ವಿವರ | ರೂ. ಪೈ. |
|---|---|---|---|
| ಶೇಅರ ಫೀ | 1,89,140.00 | ಸಾದಿಲವಾರ ಖರ್ಚು | 21,93,068.75 |
| ಶೇಅರ ಮತ್ತು ಗುಂತಾವಣೆಗಳ ಲಾಭಾಂಶ | 3,19,373.00 | ನೌಕರರ ವೇತನ | 7,41,99,623.00 |
| ಇತರ ಉತ್ಪಾದನೆಯಿಂದ ಬಂದ ಆದಾಯ | 58,698.19 | ಸಿಬ್ಬಂದಿ ಗ್ರಾಚ್ಯೂಟಿ ಮತ್ತು ಭವಿಷ್ಯ ನಿಧಿ | 1,00,31,646.62 |
| ವಿಮೆಯಿಂದ ಬಂದ ಆದಾಯ | 2,49,27,768.17 | ಸಿಬ್ಬಂದಿ ಜೀವ ವಿಮೆ ಮತ್ತು ಗ್ರಾಚ್ಯೂಟಿ ಇನ್ಶೂರನ್ಸ್ | 3,01,130.81 |
| ಕರೆ ಠೇವು ಮತ್ತು ಬ್ಯಾಂಕ ಬಡ್ಡಿ ಬಂದದ್ದು | 14,17,07,092.00 | ವಾರ್ಷಿಕ ಸೌಹಾರ್ದ ಶುಲ್ಕ | 59,000.00 |
| ಇತರೆ ಆದಾಯ | 90,96,341.62 | ಠೇವುಗಳ ಮೇಲೆ ಕೊಟ್ಟ ಬಡ್ಡಿ | 30,64,94,499.48 |
| ಇ-ಸ್ಟ್ಯಾಂಪಿಂಗ್ ಫೀ | 65,545.00 | ಠೇವು ಸಾಲಗಳ ಬಡ್ಡಿ | 6,28,549.00 |
| ಸಾಲಗಳ ಮೇಲಿನ ಬಡ್ಡಿ | 26,73,55,695.00 | ಸಾಲದ ಬಡ್ಡಿ ಮರಳಿ ಕೊಟ್ಟದ್ದು | 2,65,234.00 |
| ಸಾದಿಲವಾರ ಜಮಾ | 1,93,923.74 | ಅಂಚೆ ಮತ್ತು ತಂತಿ | 12,54,450.20 |
| ಕಾಗದ ಮತ್ತು ಮುದ್ರಣ ಆದಾಯ | 17,41,615.00 | ಇತರೆ ಭತ್ತೆಗಳು | 1,24,65,208.00 |
| ಠೇವಣಿ ಸಾಲದ ಮೇಲೆ ಬಂದ ಬಡ್ಡಿ | 81,78,246.00 | ಪ್ರವಾಸ ಖರ್ಚ | 17,29,284.20 |
| ನಾಮಿನಲ್ ಮೆಂಬರ ಮತ್ತು ಪ್ರವೇಶ ಫೀ | 47,285.00 | SGST, CGST, IGST | 74,76,952.37 |
| ಮುಂಗಡ ಸಂಬಳದಿಂದ ಬಂದ ಬಡ್ಡಿ | 21,516.00 | ಕಾಗದ ಮತ್ತು ಮುದ್ರಣ | 21,40,243.74 |
| ಸಿಬ್ಬಂದಿ ವೇತನ ಮರಳಿ ಬಂದದ್ದು | 40,79,018.00 | ಬಾಡಿಗೆ ಕರ ಮತ್ತು ವಿದ್ಯುತ ಬಿಲ್ | 1,26,88,592.00 |
| ಸಿಬ್ಬಂದಿ ಹೆಚ್ಚುವರಿ ರಜೆ | 11,66,101.00 | ವಾಹನ ಮತ್ತು ಕಛೇರಿ ವಿಮೆ | 6,53,084.00 |
| ಓವರ್‌ಡ್ರಾಫ್ಟ ಬಡ್ಡಿ | 2,86,927.89 | ವೃತ್ತಿ ಮತ್ತು ಸೇವಾ ತೆರಿಗೆ ಖಾತೆ | 2,05,000.00 |
| ಸಂಡ್ರಿ ಡೆಟರ್ಸದಿಂದ ಪಡೆದ ಬಡ್ಡಿ | 15,308.00 | ವಾರ್ಷಿಕ ಸಭೆಯ ಖರ್ಚು | 3,32,983.00 |
| ಬ್ಯಾಂಕ ಕಮಿಶನ್ ಮತ್ತು ಬಡ್ಡಿ ಬಂದದ್ದ | 95,131.59 | ನಿರ್ದೇಶಕರ ಮತ್ತು ಸಿಬ್ಬಂದಿ ತರಬೇತಿ ಖರ್ಚು | 64,11,304.00 |
| ವ್ಯಾಪಾರಿ ಲಾಭ | 2,88,19,440.24 | ಸಲಹಾ ಶುಲ್ಕ | 99,540.00 |
| | | ಇ-ಸ್ಟ್ಯಾಂಪಿಂಗ ಚಾರ್ಜಿಸ್ | 18,880.00 |
| | | ನಿರ್ದೇಶಕರ ಮಿಟಿಂಗ್ ಭತ್ತೆ | 5,04,550.00 |
| | | ಸವಕಳಿ ಖಾತೆ | 95,49,362.00 |
| | | ಪಿಗ್ಮಿ ಕಮಿಷನ್ | 1,95,765.00 |
| | | ಬ್ಯಾಂಕ ಕಮಿಷನ್ | 1,33,363.99 |
| | | ರೀಪೇರಿ ಮತ್ತು ಮೆಂಟೆನನ್ಸ್ | 23,38,304.58 |
| | | ಎಂಪ್ಲಾಯಿ ಡಿಪಾಜಿಟ್ ಲಿಂಕಡ್ ಇನ್ಶೂರನ್ಸ್(EDLI) | 3,23,321.00 |
| | | ವಾರ್ಷಿಕ ನಿರ್ವಹಣಾ ವೆಚ್ಚ | 11,99,111.70 |
| | | ಪರಿಶೀಲನಾ ವೆಚ್ಚ | 5,09,000.00 |
| | | ನೊಂದಣಿ ವೆಚ್ಚ | 40,816.00 |
| | | ಜಾಹೀರಾತು ವೆಚ್ಚ | 1,76,512.00 |
| | | ಸಮಾರಂಭ ವೆಚ್ಚ | 12,88,024.00 |
| | | ಗೌರವ ಧನ ಮತ್ತು ಸಲಹಾ ಫೀ | 2,59,200.00 |
| | | ವೇಜಿಸ್ ಖಾತೆ | 4,05,530.00 |
| | | ನಿರ್ದೇಶಕರ ವಿಮೆ | 5,72,085.00 |
| | | ಕಾರ್ಮಿಕ ರಾಜ್ಯ ವಿಮೆ(ESI) | 23,99,005.00 |
| | | ಪ್ರೋತ್ಸಾಹಧನ ವೆಚ್ಚ | 42,53,797.00 |
| | | ಡಿಜೆಲ್ ವೆಚ್ಚಗಳು | 3,00,900.00 |
| | | ಪರವಾನಗಿ ಶುಲ್ಕಗಳು | 2,47,370.00 |
| | | ಆಡಳಿತ ಶುಲ್ಕ | 3,46,663.00 |
| | | ಇತರೆ ವೆಚ್ಚಗಳು | 7,37,134.00 |
| | | ದೇಣಿಗೆ ಖಾತೆ | 28,14,400.00 |
| | | ನಿವ್ವಳ ಲಾಭ | 2,01,21,678.00 |
| | **48,83,64,165.44** | | **48,83,64,165.44** |

| ಶ್ರೀ ಟಿ. ಎಸ್. ಶಿಂದೆ | ಶ್ರೀ ಎಸ್. ಎಸ್. ಪಾಟೀಲ | ಶ್ರೀ ಎ. ಎಸ್. ಜೊಲ್ಲೆ | ಶ್ರೀ ಬಿ. ಎನ್. ಮಾಳಿ | ಲೆಕ್ಕ ಪರಿಶೋಧಕರು, ಮೆ॥ ವಿ. ಐ ಕರಾಡಕರ ಮತ್ತು ಕಂ. |
|---|---|---|---|---|
| ಲೆಕ್ಕಾಧಿಕಾರಿ | ಪ್ರಧಾನ ವ್ಯವಸ್ಥಾಪಕರು (ಪ್ರಭಾರ) | ಸಂಸ್ಥಾಪಕರು | ಚೇಅರಮನರು | ಸಿ.ಎ. ಬೆಳಗಾವಿ |

# ಸನ್ 2026–27 ನೇ ಸಾಲಿನ ಅಂದಾಜು ಖರ್ಚು ಪತ್ರಿಕೆ

| ಅ. ನಂ. | ವೆಚ್ಚದ ವಿವರಗಳು | 2025–26 ರ ಸೂಚಿತ ಅಂದಾಜು ಖರ್ಚು ರೂ. | 2025–26 ರ ಪ್ರತ್ಯಕ್ಷ ಖರ್ಚು ರೂ. | 2026–27 ರ ಅಂದಾಜು ಖರ್ಚು ರೂ. |
|---|---|---|---|---|
| 1. | ಸಿಬ್ಬಂದಿ ವೇತನ ಮತ್ತು ಭತ್ತೆ | 11,00,00,000.00 | 9,61,47,401.00 | 12,00,00,000.00 |
| 2. | ಬ್ಯಾಂಕ ವೆಚ್ಚ ಮತ್ತು ಪಿಗ್ಮಿ ಕಮೀಶನ್ | 7,50,000.00 | 3,29,128.99 | 7,50,000.00 |
| 3. | ಪ್ರವಾಸ ಖರ್ಚು(ನೌಕರರ ಹಾಗೂ ಆಡಳಿತ ಮಂಡಳಿ) | 25,00,000.00 | 17,29,284.20 | 25,00,000.00 |
| 4. | ಕಾಗದ ಮತ್ತು ಮುದ್ರಣ | 30,00,000.00 | 21,40,243.74 | 30,00,000.00 |
| 5. | ಬಾಡಿಗೆ, ವಿಮೆ ಮತ್ತು ಕರ | 1,25,00,000.00 | 1,26,87,176.00 | 1,55,00,000.00 |
| 6. | ಅಡಿಟ ಫೀ | 5,00,000.00 | 2,75,000.00 | 5,00,000.00 |
| 7. | ಸವಕಳಿ | 1,25,00,000.00 | 95,49,362.00 | 1,25,00,000.00 |
| 8. | ಅಂಚೆ ಮತ್ತು ತಂತಿ | 20,00,000.00 | 12,54,450.20 | 20,00,000.00 |
| 9. | ಠೇವುಗಳ ಮೇಲಿನ ಬಡ್ಡಿ | 31,00,00,000.00 | 30,64,94,499.48 | 33,00,00,000.00 |
| 10. | ಜಾಹೀರಾತು | 5,00,000.00 | 1,76,512.00 | 5,00,000.00 |
| 11. | ನೌಕರರ ಭವಿಷ್ಯ ನಿಧಿ, ಉಪಧಾನ ನಿಧಿ ಮತ್ತು ವಿಮೆ | 75,00,000.00 | 37,76,220.43 | 75,00,000.00 |
| 12. | ವಾಹನ ಮತ್ತು ಇತರ ವಿಮೆ | 8,50,000.00 | 5,43,494.00 | 8,50,000.00 |
| 13. | ಕಾನೂನು ಸಲಹೆಗಾರರ ಫೀ | 1,00,000.00 | 79,540.00 | 1,00,000.00 |
| 14. | ಇತರೆ ಖರ್ಚು (ಎ.ಎಮ್.ಸಿ., ಎ.ಜಿ.ಎಂ.) | 60,00,000.00 | 59,23,853.28 | 75,00,000.00 |
| 15. | ಆಡಳಿತ ಮಂಡಳಿ ಸಭಾ ಭತ್ತೆ ಮತ್ತು ವಿಮೆ | 30,00,000.00 | 10,76,635.00 | 30,00,000.00 |
| 16. | ಬ್ಯಾಂಕ ಸಾಲದ ಬಡ್ಡಿ | 20,00,000.00 | 6,28,549.00 | 20,00,000.00 |
| 17. | ಸಾದಿಲವಾರ ಖರ್ಚು | 75,00,000.00 | 74,27,523.75 | 80,00,000.00 |
| 18. | ಆದಾಯ ತೆರಿಗೆಗಳು | 5,00,000.00 | —— | 5,00,000.00 |
| 19. | ವೃತ್ತಿ ಮತ್ತು ಸೇವಾ ತೆರಿಗೆ | 60,00,000.00 | 79,38,002.37 | 1,00,00,000.00 |
| 20. | ನೊಂದಣಿ ಫೀ, ಪರಿಶೀಲನೆ ಫೀ | 8,00,000.00 | 10,00,176.00 | 13,00,000.00 |
| 21. | ಜೊಲ್ಲೆ ಗ್ರುಪ್ ವೆಲಫೆರ್ ಫೌಂಡೇಶನ ಟ್ರಸ್ಟ ದೇಣಿಗೆ ಖಾತೆ | —— | 28,14,400.00 | 40,00,000.00 |
| 22. | ನಿರ್ದೇಶಕರ ಮತ್ತು ಸಿಬ್ಬಂದಿಗಳ ಅಧ್ಯಯನ ಪ್ರವಾಸ ಇತರೆ ಖರ್ಚು | —— | 62,51,036.00 | 75,00,000.00 |
| 23. | ಲಾಭ | 2,25,00,000.00 | 2,01,21,678.00 | 2,75,00,000.00 |
| | **ಒಟ್ಟು –** | **51,10,00,000.00** | **48,83,64,165.44** | **56,70,00,000.00** |

**ವಿ.ಸೂಚನೆ :** ಅ. ನಂ. 05, 19, 20. 2025–26 ರ ಅಂದಾಜು ಖರ್ಚಿಗಿಂತ ಹೆಚ್ಚಾಗಿದ್ದರಿಂದ ತಾವು ಮಂಜೂರು ನೀಡಬೇಕಾಗಿ ವಿನಂತಿ.

# ಸನ್ 2026-27 ನೇ ಸಾಲಿನ ಅಂದಾಜು ಆದಾಯ ಪತ್ರಿಕೆ

| ಅ. ನಂ. | ಆದಾಯದ ವಿವರಗಳು | 2025-26 ರ ಸೂಚಿತ ಅಂದಾಜು ಆದಾಯ | 2025-26 ರ ಪ್ರತ್ಯಕ್ಷ ಆದಾಯ | 2026-27 ರ ಸೂಚಿತ ಅಂದಾಜು ಆದಾಯ |
|---|---|---|---|---|
| 1 | ಸಾಲದ ಮೇಲಿನ ಬಡ್ಡಿ | 30,50,00,000-00 | 27,55,70,765.00 | 32,00,00,000.00 |
| 2 | ಬ್ಯಾಂಕ ಹಾಗೂ ಗುಂತಾವಣಿಯ ಬಡ್ಡಿ | 13,00,00,000-00 | 14,21,21,596.59 | 16,00,00,000.00 |
| 3 | ಶೇಅರ ಫೀ | 5,00,000-00 | 1,89,140.00 | 5,00,000.00 |
| 4 | ಇತರ ಉತ್ಪಾದನಾ ಆದಾಯ | 2,25,00,000-00 | 2,49,86,466.36 | 3,00,00,000.00 |
| 5 | ಇತರ ಸೇವೆಗಳ ಆದಾಯ | 5,00,000-00 | 65,545.00 | 5,00,000.00 |
| 6 | ಇತರ ಆದಾಯ ಮತ್ತು ಸಾದಿಲವಾರ | 1,50,00,000-00 | 1,48,22,312.25 | 1,75,00,000.00 |
| 7 | ಸದಸ್ಯರ ಪ್ರವೇಶ ಫೀ | 1,00,000-00 | 47,285.00 | 1,00,000.00 |
| 8 | ಕಾಗದ ಮತ್ತು ಮುದ್ರಣ | 15,00,000-00 | 17,41,615.00 | 25,00,000.00 |
| 9 | ವ್ಯಾಪಾರ ಲಾಭ | 3,59,00,000-00 | 2,88,19,440.24 | 3,59,00,000.00 |
| | ಒಟ್ಟು - | **51,10,00,000-00** | **48,83,64,165.44** | **56,70,00,000.00** |

## • ನಿವ್ವಳ ಲಾಭ ವಿಭಾಗಣೆ •

ಸನ್ 2025-26 ನೇ ಸಾಲಿನ ನಿವ್ವಳ ಲಾಭ ರೂ. 2,01,21,678.00 ನ್ನು ಈ ಕೆಳಗಿನಂತೆ ವಿಭಾಗಣೆ ಮಾಡಲು ದಿಗ್ದರ್ಶಕ ಮಂಡಳಿಯವರು ಶಿಫಾರಸ್ಸು ಮಾಡಿದ್ದರಿಂದ ಅದಕ್ಕೆ ತಾವು ಅನುಮೋದನೆ ನೀಡಬೇಕಾಗಿ ವಿನಂತಿ.

| ಅ. ನಂ. | ವಿವರ | ಪ್ರತಿಶತ | ಮೊತ್ತ ರೂ. |
|---|---|---|---|
| 1. | ಕಾಯ್ದಿಟ್ಟ ನಿಧಿಗೆ | 25% | 50,30,420.00 |
| 2. | ಸಹಕಾರ ಶಿಕ್ಷಣ ನಿಧಿಗೆ | 02% | 4,02,434.00 |
| 3. | ಅನಿರೀಕ್ಷಿತ ನಷ್ಟಗಳ ಮೀಸಲು | 20% | 40,24,336.00 |
| 4. | ಸಾಮಾನ್ಯ ಕಲ್ಯಾಣ ನಿಧಿ | 05% | 10,06,084.00 |
| 5. | ಸದಸ್ಯರಿಗೆ ಲಾಭಾಂಶ (31-03-2025ರ ಶೇಅರ ಹಣ 2,38,98,600-00 ರ ಮೇಲೆ) | 10% | 23,89,860.00 |
| 6. | ಮೇಲಿನ ಅ.ನಂ. 1,2,3,4 ರಲ್ಲಿ ಹಂಚಿ ಉಳಿದ ಲಾಭ ರೂ. 96,58,404-00 ನ್ನು ಈ ಕೆಳಗಿನಂತೆ ವಿಭಾಗಿಸಿದೆ. | | |
| | 1) ಧರ್ಮಾರ್ಥ ನಿಧಿಗೆ | 10% | 9,65,840.00 |
| | 2) ಕಟ್ಟಡ ನಿಧಿಗೆ | 25% | 24,14,601.00 |
| | 3) ಸದಸ್ಯರ ಕಲ್ಯಾಣ ನಿಧಿಗೆ | 20% | 19,31,681.00 |
| | 4) ನೌಕರರ ಕಲ್ಯಾಣ ನಿಧಿಗೆ | 20% | 19,31,681.00 |
| | 5) ಕಾಯ್ದಿಟ್ಟ ನಿಧಿಗೆ | | 24,741.00 |
| | ಒಟ್ಟು - | | **2,01,21,678.00** |

## ಸಹಕಾರಿ ಸಂಘದ ಪ್ರಗತಿಯ ನೋಟ

| ಅ. ನಂ. | ವಿವರ | 2023–24 | 2024–25 | 2025–26 |
|---|---|---|---|---|
| 1 | ಸದಸ್ಯರ ಸಂಖ್ಯೆ | 37,543 | 43,176 | 52,426 |
| 2 | ವಸೂಲಾದ ಶೇರ ಬಂಡವಾಳ | 2,03,57,700.00 | 2,38,98,600.00 | 2,79,35,100.00 |
| 3 | ಕಾಯ್ದಿಟ್ಟ ಹಾಗೂ ಇತರ ನಿಧಿಗಳು | 8,14,15,236.51 | 10,47,73,472.61 | 13,21,04,063.31 |
| 4 | ಠೇವುಗಳು | 286,59,22,011.33 | 331,83,26,133.80 | 424,67,92,090.11 |
| 5 | ಸಾಲಗಳು | 129,76,78,690.00 | 163,85,16,781.00 | 254,25,08,818.35 |
| 6 | ಬ್ಯಾಂಕ ಠೇವು–ಗುಂತಾವಣಿಗಳು | 133,40,31,275.34 | 130,09,23,758.24 | 136,96,94,203.01 |
| 7 | ದುಡಿಯುವ ಬಂಡವಾಳ | 296,76,94,947.84 | 344,69,98,206.41 | 440,68,31,253.42 |
| 8 | ಖರೀದಿ | 32,39,64,681.99 | 18,20,63,139.83 | 22,43,44,145.21 |
| 9 | ಮಾರಾಟ | 34,87,92,415.20 | 21,34,65,152.00 | 25,07,73,877.93 |
| 10 | ನಿವ್ವಳ ಲಾಭ | 1,50,21,048.10 | 1,72,69,697.70 | 2,01,21,678.00 |
| 11 | ಶಾಖೆಗಳು | 81 | 81 | 82 |
| 12 | ಲಾಭಾಂಶ ಹಂಚಿದ್ದು | 10% | 10% | (ಸೂಚಿತ) 10% |

ಸಹಕಾರಿ ಸಂಘದ ಪ್ರತಿಯೊಬ್ಬ ಸಾಲಗಾರರಿಗೆ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ಸಹಕಾರಿ ಸಂಘಕ್ಕೆ ಭರಣಾ ಮಾಡಬೇಕಾದ ಸಾಲವನ್ನು ನಿಗದಿತ ವೇಳೆಯಲ್ಲಿ ತುಂಬದೇ ಇದ್ದ ಖಟಬಾಕಿ ಸಾಲಗಾರರ ಮೇಲೆ ಕಾನೂನಿನ ಪ್ರಕಾರ ಅನಿವಾರ್ಯವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಹಾಗೂ ಮುಂದೆಯೂ ಇದೇ ರೀತಿ ಕಠಿಣ ಕಾನೂನು ಕ್ರಮ ಜರುಗಿಸಿ, ಯಾವುದೇ ಕಾರಣಕ್ಕೂ ಸಹಕಾರಿ ಸಂಘದ ಖಟಬಾಕಿ ಪ್ರಮಾಣ ಹೆಚ್ಚಾಗದಂತೆ ನಿಗಾವಹಿಸುತ್ತಿದ್ದೇವೆ. ಆದ್ದರಿಂದ ತಾವೆಲ್ಲರೂ ಸಹಕರಿಸಿ ಸಾಲವನ್ನು ಸರಿಯಾದ ವೇಳೆಗೆ ಮರುಪಾವತಿಸಬೇಕಾಗಿ ವಿನಂತಿ. ತಮ್ಮ ಸಾಲ ಮತ್ತು ಬಡ್ಡಿಯನ್ನು ಸಕಾಲಕ್ಕೆ ತುಂಬಿ ತಮ್ಮ ಪತ್ತು ಕಾಯ್ದುಕೊಳ್ಳಿರಿ. ತಮ್ಮ ಸಾಲ ಅರ್ಜಿಯ ಜೊತೆಗೆ ಅವಶ್ಯಕ ದಾಖಲಾತಿಗಳನ್ನು ಸಲ್ಲಿಸಬೇಕು. ತಮ್ಮ ಸಾಲದ ಅರ್ಜಿ ಅಪೂರ್ಣವಾದಲ್ಲಿ ಅಂದರೆ ಅವಶ್ಯಕ ದಾಖಲಾತಿಗಳನ್ನು ಒದಗಿಸದಿದ್ದಲ್ಲಿ ತಮಗೆ ಸಾಲ ಮಂಜೂರು ಮಾಡುವುದರಲ್ಲಿ ಅನಾವಶ್ಯಕ ವಿಳಂಬವಾಗುವ ಅಥವಾ ತಿರಸ್ಕರಿಸಲ್ಪಡುವ ಸಾಧ್ಯತೆ ಇದೆ.

**ಜಾಮೀನುದಾರರ ಕರ್ತವ್ಯ ಮತ್ತು ಹೊಣೆಗಾರಿಕೆಗಳು :**

1. ಸಹಕಾರಿ ಸಂಘದ ಸಾಲದ ರಕಮಿಗೆ ಜಾಮೀನು ನೀಡಿದ ಸದಸ್ಯರು ಸಾಲಗಾರರಷ್ಟೇ ಜವಾಬ್ದಾರರಾಗಿರುತ್ತಾರೆ.
2. ಜಾಮೀನು ಆಗುವ ಪೂರ್ವದಲ್ಲಿ ಸಾಲಗಾರನ ಆರ್ಥಿಕ ಸ್ಥಿತಿ, ಸಾಲದ ಉದ್ದೇಶ ಹಾಗೂ ತುಂಬುವ ಸಾಮರ್ಥ್ಯದ ಬಗ್ಗೆ ಚನ್ನಾಗಿ ತಿಳಿದುಕೊಳ್ಳಬೇಕು. ಅಲ್ಲದೇ ನಿಗದಿಯಾದ ಕಾಲಕ್ಕೆ ಸಾಲಗಾರನು ಕಂತುಗಳನ್ನು ತುಂಬುವಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿದೆ.
3. ಸಾಲಗಾರನು ಪಡೆದುಕೊಂಡ ಸಾಲವನ್ನು ವೇಳೆಗೆ ಸರಿಯಾಗಿ ತುಂಬದೇ ಇದ್ದಲ್ಲಿ ಸಾಲಗಾರರ ಜೊತೆಗೆ ಅವರ ಜಾಮೀನುದಾರರನ್ನು ಕೂಡ ಸಮಾನವಾಗಿ ಕಾನೂನಿನನ್ವಯ ಪರಿಗಣಿಸಲಾಗುವುದು. ಆದ ಕಾರಣ ಸದಸ್ಯರು ಜಾಮೀನು ನೀಡಿದ ಸಾಲಗಾರನ ಸಾಲದ ಮರುಪಾವತಿಯನ್ನು ವೇಳೆಗೆ ಸರಿಯಾಗಿ ತುಂಬುವಂತೆ ಮಾಡಿ ಸಹಕರಿಸಬೇಕಾಗಿ ವಿನಂತಿ.

**ಸದಸ್ಯರು ಗಮನಿಸಬೇಕಾದ ಸಂಗತಿಗಳು :**

1. ಯಾವುದೇ ಸದಸ್ಯರು ಸಹಕಾರಿ ಸಂಘದ ಮೂರು ನಿರಂತರ ಸಾಮಾನ್ಯ ಸಭೆಗೆ ಪೂರ್ವಾನುಮತಿ ಇಲ್ಲದೆ ಗೈರುಹಾಜರಾಗಿದ್ದರೆ ಮತ್ತು ಕನಿಷ್ಠ ವ್ಯವಹಾರ ಮಾಡದಿದ್ದರೆ ಮತ್ತು ಸಂಘದ ಸಾಲಗಾರರಿದ್ದು ಕಟಬಾಕಿದಾರರಾಗಿದ್ದಲ್ಲಿ (ಸಾಲ ಮತ್ತು ಬಡ್ಡಿ) ಅಂತಹ ಸದಸ್ಯರು ಸಂಘದ ಚುನಾವಣೆಯಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
2. ಸಹಕಾರಿ ಸಂಘವು ಸದಸ್ಯರಿಗೆ ನೀಡುವ ಲಾಭಾಂಶವನ್ನು ಆಯಾ ವರ್ಷದಿಂದ ಮೂರು ವರ್ಷದ ಒಳಗೆ ಪಡೆಯಬೇಕು. ತಪ್ಪಿದ್ದಲ್ಲಿ ಲಾಭಾಂಶವನ್ನು ಕಾಯ್ದಿಟ್ಟ ನಿಧಿಗೆ ಜಮಾ ಮಾಡಲಾಗುವುದು.
3. ಸದಸ್ಯರು ತಾವು ವಾಸಿಸುವ ವಿಳಾಸದಲ್ಲಿ ಬದಲಾವಣೆಯಾಗಿದ್ದಲ್ಲಿ, ಕೂಡಲೇ ಬದಲಾದ ವಿಳಾಸವನ್ನು ಸಹಕಾರಿ ಸಂಘಕ್ಕೆ ಲಿಖಿತವಾಗಿ ತಿಳಿಸಬೇಕು. ಇದರಿಂದ ಪತ್ರ ವ್ಯವಹಾರಕ್ಕೆ ಅನೂಕೂಲವಾಗುತ್ತದೆ. ಇದಕ್ಕೆ ತಪ್ಪಿದ್ದಲ್ಲಿ ಆಗುವಂತಹ ಯಾವುದೇ ರೀತಿಯ ಸಮಸ್ಯೆಗಳಿಗೂ ನಮ್ಮ ಸಹಕಾರಿ ಸಂಘವು ಜವಾಬ್ದಾರಿಯಾಗುವುದಿಲ್ಲ.
4. ಪ್ರತಿಯೊಬ್ಬ ಸದಸ್ಯರು ಹಾಗೂ ಠೇವುದಾರರು ವಾರಸದಾರರನ್ನು ನೇಮಿಸುವ ಅವಕಾಶವಿದ್ದು, ಕಾನೂನಿನ ತೊಡಕುಗಳನ್ನು ತಪ್ಪಿಸಲು ವಾರಸದಾರರ ಹೆಸರುಗಳನ್ನು ನಮೂದಿಸಬೇಕಾಗಿ ವಿನಂತಿ.
5. ಒಬ್ಬ ವ್ಯಕ್ತಿ ಒಂದೇ ಪ್ರಕಾರದ ಉದ್ದೇಶ ಹೊಂದಿದ ಒಂದಕ್ಕಿಂತ ಹೆಚ್ಚಿನ ಸಂಘಗಳಲ್ಲಿ ಸದಸ್ಯರಾಗುವುದು ಕಾನೂನಿನ ವಿರುದ್ಧವಾಗಿರುತ್ತದೆ. ಆದಕಾರಣ ಒಂದೇ ಪ್ರಕಾರ ಕಾರ್ಯನಿರ್ವಹಿಸುವ ಒಂದೇ ಸಹಕಾರಿ ಸಂಘದಲ್ಲಿ ಮಾತ್ರ ತಮ್ಮ ಸದಸ್ಯತ್ವವನ್ನು ಹೊಂದಬೇಕಾಗಿ ವಿನಂತಿ.
6. ನಿಮ್ಮ ಸೇವೆ ಸಲ್ಲಿಸುವುದೇ ನಮ್ಮ ಆದ್ಯ ಕರ್ತವ್ಯ. ಸಹಕಾರಿ ಸಂಘ ಅಭಿವೃದ್ಧಿಯ ನಿಟ್ಟಿನಲ್ಲಿ ನಿಮ್ಮ ಸಲಹೆ ಸೂಚನೆಗಳು ಯಾವಾಗಲೂ ಸ್ವಾಗತಾರ್ಹ.

**ವಿ.ಸೂ. –** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸುತ್ತೋಲೆಯ ಮೇರೆಗೆ ಸಹಕಾರಿಯಲ್ಲಿ ವ್ಯವಹರಿಸುವ ಎಲ್ಲ ಗ್ರಾಹಕರು ಕಡ್ಡಾಯವಾಗಿ ಸದಸ್ಯರಾಗಿರಬೇಕು.

# ನಿರ್ದೇಶಕರ ಮತ್ತು ಸಿಬ್ಬಂದಿಗಳ ಸೌಲಭ್ಯಗಳು

**ನಿರ್ದೇಶಕ ಮಂಡಳಿ ಹಾಗೂ ಶಾಖಾ ಸಲಹಾ ಸಮಿತಿ ಸದಸ್ಯರಿಗೆ ಮರಣೋತ್ತರ ಪರಿಹಾರ ನಿಧಿ.**

* 60 ವರ್ಷ ಒಳಗಿನ ಶಾಖಾ ಸಲಹಾ ಸಮಿತಿ ಸದಸ್ಯರು ನೈಸರ್ಗಿಕ ಮರಣ ಹೊಂದಿದ್ದಲ್ಲಿ ರೂ. 10 ಲಕ್ಷ. ಅಪಘಾತ ಮರಣ ಹೊಂದಿದಲ್ಲಿ ರೂ. 20 ಲಕ್ಷ ಅದೇ ರೀತಿ ಮುಖ್ಯ ಕಚೇರಿ ನಿರ್ದೇಶಕರು ನೈಸರ್ಗಿಕ ಮರಣ ಹೊಂದಿದ್ದಲ್ಲಿ ರೂ. 25 ಲಕ್ಷ. ಅಪಘಾತ ಮರಣ ಹೊಂದಿದಲ್ಲಿ ರೂ. 35 ಲಕ್ಷ.
* 60 ವರ್ಷ ಮೇಲ್ಪಟ್ಟ ಶಾಖಾ ಸಲಹಾ ಸಮಿತಿ ಸದಸ್ಯರು ನೈಸರ್ಗಿಕ ಮರಣ ಹೊಂದಿದ್ದಲ್ಲಿ ರೂ. 5 ಲಕ್ಷ. ಅಪಘಾತ ಮರಣ ಹೊಂದಿದಲ್ಲಿ ರೂ. 15 ಲಕ್ಷ ಅದೇ ರೀತಿ ಮುಖ್ಯ ಕಚೇರಿ ನಿರ್ದೇಶಕರು ನೈಸರ್ಗಿಕ ಮರಣ ಹೊಂದಿದ್ದಲ್ಲಿ ರೂ. 10 ಲಕ್ಷ. ಅಪಘಾತ ಮರಣ ಹೊಂದಿದಲ್ಲಿ ರೂ. 20 ಲಕ್ಷ ಮರಣೋತ್ತರ ಪರಿಹಾರ ನಿಧಿಯಾಗಿ ವಾರಸುದಾರರಿಗೆ ನೀಡಲಾಗುತ್ತದೆ.

**ಸಿಬ್ಬಂದಿ ಸವಲತ್ತುಗಳು–**

* ಭವಿಷ್ಯ ನಿಧಿ (PF)   * ಉಪದಾನ ನಿಧಿ (Gratuity)   * ಬೋನಸ್ – ಒಂದು ತಿಂಗಳ ವೇತನ
* Employees Deposit Linked Insurance (EDLI )
* ಸಿಬ್ಬಂದಿ ಪ್ರವಾಸ ಭತ್ತೆ, ಮಕ್ಕಳ ಶೈಕ್ಷಣಿಕ ಭತ್ತೆ, ಮನೆ ಬಾಡಿಗೆ ಮತ್ತು ನಗರ ಭತ್ತೆ.
* ಸಿಬ್ಬಂದಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ವೇತನ ಸಾಲ.
* ವೈದ್ಯಕೀಯ ಧನಸಹಾಯ ರೂ. 1 ಲಕ್ಷ  (ಕುಟುಂಬದಲ್ಲಿನ 4 ಜನ ಸೇರಿ ಅಂದರೆ ಗಂಡ, ಹೆಂಡತಿ ಹಾಗೂ 2 ಮಕ್ಕಳು)
* ಸಿಬ್ಬಂದಿ ಪತ್ನಿ ಹಾಗೂ ಮಹಿಳಾ ಸಿಬ್ಬಂದಿಗೆ ಹೆರಿಗೆ ಧನ ಸಹಾಯ ( ಸಾಮಾನ್ಯ ಹೆರಿಗೆಗೆ ರೂ. 7,000, ಶಸ್ತ್ರ ಚಿಕಿತ್ಸೆಗೆ ರೂ. 20,000)

* **ರಾಜ್ಯ ನೌಕರರ ವಿಮೆ (ESI)–** ರೂ. 21,000 ಕ್ಕಿಂತ ಕಡಿಮೆ ವೇತನ ಹೊಂದಿರುವ ಸಹಕಾರಿ ಸಂಘದ ಎಲ್ಲ ಸಿಬ್ಬಂದಿಯವರನ್ನು ಕರ್ನಾಟಕ ರಾಜ್ಯ ನೌಕರರ ವಿಮೆ (ESI) ಯೋಜನೆಯಡಿ ನೋಂದಾಯಿಸಲಾಗಿದೆ. ಸಿಬ್ಬಂದಿಗಳ ಕುಟುಂಬದ ಸಂಪೂರ್ಣ ಆರೋಗ್ಯ ರಕ್ಷಣೆ ಈ ಯೋಜನೆಯ ಮೂಲ ಉದ್ದೇಶವಾಗಿದೆ. (ಸಿಬ್ಬಂದಿಯ ತಂದೆ–ತಾಯಿ, ಹೆಂಡತಿ ಮತ್ತು ಮಕ್ಕಳು ಈ ಯೋಜನೆಯಲ್ಲಿ ನಿಯಮಾನುಸಾರ ಪಾಲ್ಗೊಂಡಿರುತ್ತಾರೆ.)

**ಸಿಬ್ಬಂದಿ ಮರಣೋತ್ತರ ಪರಿಹಾರ ನಿಧಿ–**

ಸಿಬ್ಬಂದಿಗಳ ನೈಸರ್ಗಿಕ ಮರಣಕ್ಕೆ ರೂ. 10 ಲಕ್ಷ ಮತ್ತು ಅಫಘಾತ ಮರಣಕ್ಕೆ ರೂ. 20 ಲಕ್ಷ ಅವರ ಕುಟುಂಬಕ್ಕೆ ಮರಣೋತ್ತರ ಪರಿಹಾರ ನಿಧಿಯಾಗಿ ನೀಡಲಾಗುತ್ತದೆ.

## GROWTH GRAPH


















# ಭಾವಪೂರ್ಣ ಶ್ರದ್ಧಾಂಜಲಿ



**ಲಿಂಗೈಕ್ಯ ಶ್ರೀ. ಜ್ಯೋತಿ ಎಸ್. ಗಿಡ್ಡ**
ಮಾಜಿ ನಿರ್ದೇಶಕರು

ಸರಳ ಸಜ್ಜನಿಕೆಯ ಸಾಕಾರ ಮೂರ್ತಿ, ಹಿರಿಯ ಜೀವಿ ಹಾಗೂ ಜ್ಯೋತಿ ಸಹಕಾರಿ ಸಂಘದ ಮುಖ್ಯ ಕಛೇರಿಯ ಮಾಜಿ ನಿರ್ದೇಶಕರಾದ ಲಿಂಗೈಕ್ಯ ಶ್ರೀ. ಜ್ಯೋತಿ ಎಸ್. ಗಿಡ್ಡ ಸಾ. ಯಕ್ಸಂಬಾ ಇವರು ದಿನಾಂಕ : 25/06/2025 ರಂದು ಲಿಂಗೈಕ್ಯರಾಗಿದ್ದು ಇವರು ನಮ್ಮ ಸಂಘಕ್ಕೆ ಸಲ್ಲಿಸಿದ ಸೇವೆ ಸಹಾಯ ಮತ್ತು ಸಹಕಾರವನ್ನು ನೆನೆಯುತ್ತ ಭಗವಂತನು ಅವರ ಜೀವಾತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

------------ ***** ------------

ನಮ್ಮ ಸಹಕಾರಿ ಸಂಘದ ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ ಕೈ. ಮನೋಹರ ರಾಮಚಂದ್ರ ಭಸ್ಮೆ ಶಾಖೆ– ಆಲಮೇಲ, ಕೈ, ಪ್ರಕಾಶ ರಂಗಪ್ಪಾ ಗುಳೇದಗುಡ್ಡ ಶಾಖೆ–ಕಮತಗಿ ಇವರು ವಿಧಿವಶರಾಗಿದ್ದು, ನಮ್ಮ ಸಹಕಾರಿ ಸಂಘಕ್ಕೆ ಸಲ್ಲಿಸಿದ ಸೇವೆ ಸಹಾಯ ಮತ್ತು ಸಹಕಾರವನ್ನು ನೆನೆಯುತ್ತಾ ಅವರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

------------ ***** ------------

ನಮ್ಮ ಸಹಕಾರಿ ಸಂಘದ ಸಿಬ್ಬಂದಿಗಳಾದ ಕೈ. ಸಂತೋಷ ಬಸವರಾಜ ನಾಗರಾಳೆ ಶಾಖೆ – ಉಗಾರ ಬುದ್ರುಕ್, ಕೈ. ಸಂತೋಷ ಅಶೋಕ ಗುಂಡಾಳೆ ಶಾಖೆ – ಮುದ್ದೇಬಿಹಾಳ, ಇವರು ವಿಧಿವಶರಾಗಿದ್ದು, ನಮ್ಮ ಸಹಕಾರಿ ಸಂಘಕ್ಕೆ ಸಲ್ಲಿಸಿದ ಸೇವೆ ಸಹಾಯ ಮತ್ತು ಸಹಕಾರವನ್ನು ನೆನೆಯುತ್ತಾ ಅವರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

------------ ***** ------------

ನಮ್ಮನ್ನಗಲಿದ ದೇಶರಕ್ಷಣೆಗಾಗಿ ಪ್ರಾಣತೆತ್ತ ವೀರಯೋಧರು, ರಾಜಕೀಯ ಗಣ್ಯರು, ಸಾಹಿತಿಗಳು, ಕಲಾವಿದರು ಮತ್ತು ನಮ್ಮ ಸಂಘದ ಸದಸ್ಯರು ಇವರುಗಳ ಜೀವಾತ್ಮಗಳಿಗೆ ಆ ಭಗವಂತನು ಚಿರಶಾಂತಿ ನೀಡಲೆಂದು ಸಹಕಾರಿ ಸಂಘದ ಸಂಸ್ಥಾಪಕರು, ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.



14 ನೇ ಪ್ರೇರಣಾ ಉತ್ಸವದ 'ಪ್ರೇರಣಾ ಪುರಸ್ಕಾರ'ವನ್ನು ದೆಹಲಿಯ ಚಯನೀತ್ ಫೌಂಡೇಶನ್ 5 ವಿಶೇಷ ಚೇತನ ಮಕ್ಕಳಿಗೆ ನೀಡಿ ಗೌರವಿಸಿದ ಕ್ಷಣ



ಬಿ.ಡಿ.ಸಿ.ಸಿ ಬ್ಯಾಂಕ್ ನಿ., ಬೆಳಗಾವಿ ಇದರ ನೂತನ ಅಧ್ಯಕ್ಷರಾಗಿ ಶ್ರೀ ಅಣ್ಣಾಸಾಹೇಬ ಜೊಲ್ಲೆ ಇವರು ಸರ್ವಾನುಮತದಿಂದ ಆಯ್ಕೆಯಾದ ಸಂದರ್ಭ




ಜೊಲ್ಲೆ ಗ್ರೂಪ್ ವತಿಯಿಂದ ನಿಪ್ಪಾಣಿಯಲ್ಲಿ ಭವ್ಯ ಕೃಷಿ ಉತ್ಸವ 2026 ಉದ್ಘಾಟನಾ ಸಮಾರಂಭದ ನೋಟ



ಜ್ಯೋತಿ ಬಜಾರ್ ಸಿಬ್ಬಂದಿಗಳಿಗೆ ಒಂದು ದಿನದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಾಗಾರ



ನಿಪ್ಪಾಣಿಯ ಶಿವಾಜಿ ನಗರದಲ್ಲಿ ಪ್ರಾರಂಭವಾದ 82 ನೇ ನೂತನ ಶಾಖೆಯ ಉದ್ಘಾಟನಾ ಸಮಾರಂಭ




ಸಂಘದ ಅನಂತಪೂರ ಶಾಖೆಯಲ್ಲಿ ಹೃದಯಘಾತದಿಂದ ಮೃತರಾದ ಸಾಲಗಾರರ ವಾರಸುದಾರರಿಗೆ ಮರಣೋತ್ತರ ಪರಿಹಾರ ನಿಧಿ ವಿತರಣೆ




ಜ್ಯೋತಿ ಲಕ್ಕಿ ಡ್ರಾ – ದಸರಾ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ಲಕ್ಕಿ ಡ್ರಾ ವಿಜೇತರರಿಗೆ ಬಹುಮಾನ ವಿತರಣೆ




ಜಾತ್ರಾ ವಿಶೇಷ – ಲಕ್ಕಿ ಡ್ರಾ ವಿಜೇತರರಿಗೆ ಬಹುಮಾನ ವಿತರಣೆ

## ನಮ್ಮ ಸಹಕಾರಿಯ ಆಕರ್ಷಕ ಠೇವು ಯೋಜನೆಗಳು

# ವಿಶೇಷ ಠೇವು ಯೋಜನೆ 10% | 10.5%*

| ಬಸವ ಜ್ಯೋತಿ ಠೇವು (ತಿಂಗಳ ಬಡ್ಡಿ) ಯೋಜನೆ | |
|---|---|
| 1 ವರ್ಷದವರೆಗೆ ಠೇವು | 8% |
| 3 ವರ್ಷದವರೆಗೆ ಠೇವು | 8.5% |

| ಜ್ಯೋತಿ ಠೇವು ಯೋಜನೆ | |
|---|---|
| 15 ರಿಂದ 29 ದಿವಸದವರೆಗೆ | 4.5% |
| 30 ರಿಂದ 45 ದಿವಸದವರೆಗೆ | 6% |
| 46 ರಿಂದ 90 ದಿವಸದವರೆಗೆ | 8.5% |
| 91 ರಿಂದ 180 ದಿವಸದವರೆಗೆ | 9% |
| 181 ದಿನದಿಂದ 1 ವರ್ಷದವರೆಗೆ | 9.5% |

**ದ್ವಿಗುಣ ಯೋಜನೆ**
**8 ವರ್ಷ ಅವಧಿಗೆ**

| ಮುದ್ದತ ಠೇವು ಯೋಜನೆ | |
|---|---|
| 12 ತಿಂಗಳಿಂದ 24 ತಿಂಗಳವರೆಗೆ | 10% |
| 25 ತಿಂಗಳಿಂದ 36 ತಿಂಗಳವರೆಗೆ | 9.5% |

| ರಿಕರಿಂಗ ಠೇವು ಯೋಜನೆ | |
|---|---|
| 1 ವರ್ಷ ನಿಗದಿತ ಅವಧಿಗೆ | 8.5% |
| 2 ವರ್ಷ ಮತ್ತು 3 ವರ್ಷ ನಿಗದಿತ ಅವಧಿಗೆ | 9% |

| ಆಶಾಜ್ಯೋತಿ ಠೇವು (ತ್ರೈಮಾಸಿಕ ಬಡ್ಡಿ ಯೋಜನೆ) | |
|---|---|
| 1 ವರ್ಷ ನಿಗದಿತ ಅವಧಿಗೆ | 8.5% |
| 2 ವರ್ಷ ನಿಗದಿತ ಅವಧಿಗೆ | 9% |
| 3 ವರ್ಷ ನಿಗದಿತ ಅವಧಿಗೆ | 9.5% |

ಹಿರಿಯ (60 ವರ್ಷ ಹಾಗೂ ಮೇಲ್ಪಟ್ಟು) ನಾಗರಿಕರಿಗೆ, ಮಾಜಿ ಸೈನಿಕರಿಗೆ, ವಿಧವೆಯರಿಗೆ ಹಾಗೂ ಅಂಗವಿಕಲರಿಗೆ ಚಾಲ್ತಿ ಬಡ್ಡಿ ದರಕ್ಕಿಂತ 0.5% ಹೆಚ್ಚಿಗೆ ಬಡ್ಡಿ ಸೌಲಭ್ಯ (ದ್ವಿಗುಣ ಯೋಜನೆ ಮತ್ತು ರಿಕರಿಂಗ ಠೇವು ಹೊರತುಪಡಿಸಿ)

## ವಿವಿಧ ಸಾಲ ಸೌಲಭ್ಯಗಳು

| | | |
|---|---|---|
| ಗೃಹ ಸಾಲ | ಕೃಷಿ ಸಾಲ | ಜ್ಯೋತಿ ಕಿರು ಸಾಲ |
| ನಗದು ಪತ್ತಿನ ಸಾಲ | ಶಿಕ್ಷಣ ಸಾಲ | ಬಂಗಾರ ಸಾಲ |
| ವಾಹನ ಸಾಲ | ಕೈಗಾರಿಕೆ ಸಾಲ | ಬಂಗಾರ ಪತ್ತಿನ ಸಾಲ |

- ಸಾಲಗಳ ಬಡ್ಡಿದರ – ಮಾಸಿಕ ಬಡ್ಡಿ 14%, ತ್ರೈಮಾಸಿಕ ಬಡ್ಡಿ 15%, ವಾರ್ಷಿಕ ಬಡ್ಡಿ 16%
- ಬಂಗಾರ ಸಾಲ – ಮಾಸಿಕ ಬಡ್ಡಿ 13%, ತ್ರೈಮಾಸಿಕ ಬಡ್ಡಿ 14%, ವಾರ್ಷಿಕ ಬಡ್ಡಿ 15%

## ವಿಶೇಷ ಸೇವೆಗಳು

| | |
|---|---|
| ಜೀವ, ಅರೋಗ್ಯ ಹಾಗೂ ಸಾಮಾನ್ಯ ವಿಮೆ | NEFT / RTGS ಸರ್ವಿಸ್ (Inward & Outward) (ಬ್ಯಾಂಕಗಳ ಸಹಯೋಗದೊಂದಿಗೆ) |
| ಮ್ಯೂಚುವಲ್ ಫಂಡ್ | ವೆಸ್ಟರ್ನ್ ಯುನಿಯನ್, ಮನಿಗ್ರಾಮ ಮನಿ ಟ್ರಾನ್ಸ್ಫರ್ |
| ಶೇರ್ ಟ್ರೆಡಿಂಗ್ | ವಿದೇಶಿ ಹಣ ವಿನಿಮಯ |
| ಡಿ–ಮ್ಯಾಟ್ ಅಕೌಂಟ್ | ಪಾಸ್ ಪೋರ್ಟ್ ಸೇವೆ |
| ಪ್ಯಾನ್ ಕಾರ್ಡ್ ಸೇವೆ | ವಿಮಾನ, ರೈಲು ಮತ್ತು ಬಸ್ ಟಿಕೇಟ್ ಬುಕಿಂಗ್ |
| ಚಾರಿಯಟ್ ವರ್ಲ್ಡ್ ಟೂರ್ಸ್ & ಸರ್ವಿಸಸ್ | ಡಿ.ಟಿ.ಎಚ್ ಮತ್ತು ಮೊಬೈಲ್ ರಿಚಾರ್ಜ್ |
| ಮಿನಿ ಎ.ಟಿ.ಎಮ್. | ಇ–ಸ್ಟ್ಯಾಂಪ್ |

ತೆರೆದ–ಅಂಚೆ

M.R. No. ................................

ಗೆ,
ಶ್ರೀ. ______________________________

______________________________

ಮುಖ್ಯ ಕಛೇರಿ : ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ. ತಾ. ಚಿಕ್ಕೋಡಿ ಜಿ. ಬೆಳಗಾವಿ–591244 Ph : 7338047005
E-mail : gm@jyotimultipurpose.com website : www.jyotimultipurpose.com